**2** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ**115/2018**</u>

| | | |
|---|---|---|
| 3 ನೇ ಆರೋಪಿಯ ಹೆಸರು | : | ಹುಚ್ಚೇಗೌಡ ಹೆಚ್.ಡಿ., |
| ತಂದೆಯ ಹೆಸರು | : | ಲೇಟ್ ದೊಡ್ಡೇಗೌಡ, |
| ವಯಸ್ಸು | : | 70 ವರ್ಷ, |
| ವಾಸಸ್ಥಳ | : | ಲಕ್ಷಮೀಶ್ ನಗರ, 1 ನೇ ಕ್ರಾಸ್, ಚಿಕ್ಕಮಗಳೂರು. |

<u>ಕಲಂ **313** ಸಿ.ಆರ್ ಪಿ.ಸಿ ಅಡಿಯಲ್ಲಿ ಆರೋಪಿತರ ಹೇಳಿಕೆ</u>

ಪ್ರಶ್ನೆ-1 ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯವಿಚಾರವನ್ನು ಕೇಳಿದ್ದೀರಾ?
ಉತ್ತರಃ Yes

ಪ್ರಶ್ನೆ-2 ಫ್ರಾ.ಸಾ.1 ಕಾವ್ಯಶ್ರೀ, ಇವರು ತಮ್ಮ ಸಾಕ್ಷ್ಯದಲ್ಲಿ, 1 ನೇ ಆರೋಪಿಯಾದ ನೀನು ತನ್ನ ಗಂಡ, 2 ನೇ ಆರೋಪಿಯಾದ ನೀನು ತನ್ನ ಅತ್ತೆ, 3 ನೇ ಆರೋಪಿಯಾದ ಹುಚ್ಚೇಗೌಡ ತನ್ನ ಮಾವ, 4 ನೇ ಆರೋಪಿಯಾದ ಶೀಲಾ ಆಕೆಯ ಗಂಡನ ಅಕ್ಕ ಆಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ False

ಪ್ರಶ್ನೆ-3 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನ್ನ ಮತ್ತು 1 ನೇ ಆರೋಪಿಯಾದ ನಿನ್ನನ್ನು ಮದುವೆಯಾಗಿ ಇವತ್ತಿಗೆ ಸುಮಾರು 6 ವರ್ಷಗಳು ಆಗಿದ್ದಾಗಿ, ಮದುವೆಯಾದ ನಂತರ ತಾನು ತನ್ನ ಗಂಡನ ಮನೆಯಲ್ಲಿ ಅತ್ತೆ ಮಾವ ಅವರ ಜೊತೆ ವಾಸಿಸುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ False

ಪ್ರಶ್ನೆ-4 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು 2014 ರಲ್ಲಿ 1 ನೇ ಆರೋಪಿಯಾದ ನೀನು ಕಂಪನಿ ವತಿಯಿಂದ London ಗೆ project ಕೆಲಸಕ್ಕೆ ಹೋಗಿದ್ದಾಗಿ, ತಾನು ಅತ್ತೆ ಮಾವನ ಮನೆಯಲ್ಲಿ

ಇದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-5 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು 1 ನೇ ಆರೋಪಿಯಾದ ನೀನು ಬೆಂಗಳೂರಿನ Infosys ಕಂಪನಿಯಲ್ಲಿ ಸುಮಾರು 6 ತಿಂಗಳ ಕಾಲ ಇದ್ದುದಾಗಿ, 1 ನೇ ಆರೋಪಿಯಾದ ನೀನು ವರದಕ್ಷಿಣೆ ಹಣ ತರಲಿಲ್ಲ ಎನ್ನುವ ವಿಚಾರಕ್ಕಾಗಿ ತನಗೆ ಮಾನಸಿಕವಾಗಿ ಹಿಂಸೆ ಕೊಡುವುದು ಮತ್ತು ಹೊಡೆಯುವುದು ಬಡೆಯುವುದು ಮಾಡುತ್ತಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-6 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 07.05.2017 ರಂದು 1 ನೇ ಆರೋಪಿಯಾದ ನೀನು ತನ್ನ ಕುತ್ತಿಗೆಯನ್ನು ನಿನ್ನ ಕೈಯಿಂದ ಬಲವಾಗಿ ಹಿಸುಕಿ ಸಾಯಿಸಲು ಪ್ರಯತ್ನ ಪಟ್ಟಿದ್ದಾಗಿ, ತನ್ನ ಕುತ್ತಿಗೆಗೆ ರಕ್ತ ಗಾಯವಾಗಿದ್ದಾಗಿ, ತಾನು ಆರೋಪಿಗಳಾದ ನಿಮ್ಮ ಮೇಲೆ ಬೆಂಗಳೂರಿನ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದಾಗಿ, ನಂತರ ತನ್ನ ತಂದೆ ಮತ್ತು ಪೊಲೀಸರು ಸೇರಿ ರಾಜಿ ಸಂದಾನ ಮಾಡಿಸಿದ ನಂತರ ತಾನು ಮತ್ತೆ ಚಿಕ್ಕಮಗಳೂರಿನ ಲಕ್ಷ್ಮೀಶನಗರದಲ್ಲಿ ಇರುವ ನಿಮ್ಮ ಮನೆಗೆ ಹೋಗಿ ವಾಸಿಸಲು ಆರಂಭಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-7 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ತಾನು ಚಿಕ್ಕಮಗಳೂರು ಕಾಲೇಜಿನ ಎಂ.ಇ.ಎಸ್. ಕಾಲೇಜಿನಲ್ಲಿ ಅತಥಿ ಉಪನ್ಯಾಸಕಿ ಎಂದು ಕೆಲಸಕ್ಕೆ ಸೇರಿದ್ದು, ಆರೋಪಿಗಳಾದ ನಿಮ್ಮ ಮನೆಯಿಂದಲೇ ಓಡಾಡುತ್ತಿದ್ದುದಾಗಿ, ನಂತರ ಚಿಕ್ಕಮಗಳೂರಿನ ನಿಮ್ಮ ಮನೆಯಲ್ಲಿಯೂ ಸಹ ತನಗೆ ಆರೋಪಿಗಳಾದ ನೀವುಗಳು ವರದಕ್ಷಿಣೆ ಹಣ ತಂದಿಲ್ಲ ಎಂದು ಮಾನಸಿಕ ಹಿಂಸೆ, ಬೈಯುವುದು, ಹೊಡೆಯುವುದು ಮಾಡುತ್ತಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-8 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು 4 ನೇ ಆರೋಪಿಯಾದ ನೀನು ಫೋನ್ ಮುಖಾಂತರ 1 ರಿಂದ 3 ನೇ ಆರೋಪಿಗಳಿಗೆ ಚಾಡಿ ಮಾತು ಹೇಳಿ ಆಕೆಯನ್ನು ಸಾಯಿಸಿಬಿಡಿ ನಂತರ 1 ನೇ ಆರೋಪಿಗೆ ಇನ್ನೊಂದು ಮದುವೆ ಮಾಡಬಹುದು ಎಂದು ಹೇಳುತ್ತಿದ್ದಾಗಿ, ಆರೋಪಿಗಳಾದ ನೀವು ವರದಕ್ಷಿಣೆ ತಂದಿಲ್ಲ ಎಂದು ತನಗೆ ಅವಚ್ಯಾ ಶಬ್ದಗಳಿಂದ ಬೆವರ್ಸಿ ಮುಂಡೆ, ಹಲ್ಕಟ್ ಮುಂಡೆ ಎಂದು ಬೈಯುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-9 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 27.09.2017 ರಂದು ತಾನು ಮದ್ಯಾಹ್ನ ಊಟಕ್ಕೆ ಎಂದು ಮನೆಗೆ ಬಂದಾಗ, 2 ಮತ್ತು 3 ನೇ ಆರೋಪಿಗಳಾದ ನೀವು ಮನೆಗೆ ಪುಕ್ಕಸಟ್ಟೆ ಊಟ ಮಾಡಲು ಬರುತ್ತೀಯ ಬೇವರ್ಸಿ ಮುಂಡೆ ಎಂದು ಬೈದು, 3 ನೇ ಆರೋಪಿಯಾದ ನೀನು ಒಳಗಡೆ ಹೋಗಿ ಚಾಕುವನ್ನು ಗ್ಯಾಸ್ ಸ್ಟವ್ ಮೇಲೆ ಇಟ್ಟು ಬಿಸಿ ಮಾಡಿಕೊಂಡು ಬಂದು, 2 ನೇ ಆರೋಪಿಯಾದ ನೀನು ತನ್ನ ಎರಡು ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡು ತನ್ನ ಎಡಕೈ ಗೆ ಬಿಸಿಯಾದ ಚಾಕುವಿನಿಂದ ಬರೆ ಹಾಕಿದ್ದಾಗಿ ಮತ್ತು ಬಲಗಾಲಿಗೂ ಸಹ ಚಾಕುವಿನಿಂದ ಬರೆ ಹಾಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-10 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾನು ನೋವಿನಿಂದ ಜೊರಾಗಿ ಕೂಗಿಕೊಂಡಿರುವುದಾಗಿ, 2 ನೇ ಆರೋಪಿಯಾದ ನೀನು ತನ್ನ ಕೈಯಿಂದ ಬಾಯಿಯನ್ನು ವತ್ತಿ ಹಿಡಿದಿದ್ದಾಗಿ, 3 ನೇ ಆರೋಪಿಯಾದ ನೀನು Charger ನ ವೈರನ್ನು ತಂದು ತನ್ನ ಕೈ ಮೈ ಮೇಲೆ ಎಲ್ಲಾ ಹೊಡೆದು ಮತ್ತು ಬೆನ್ನಿಗೆ ಕೈಗಳಿಂದ ಗುದ್ದಿ ಬೇವರ್ಸಿ ಮುಂಡೆ ಅಂತ ಬೈದಿದ್ದಾಗಿ, ನಂತರ ತನ್ನನ್ನು ಸಾಯಿಸಿಬಿಡುತ್ತೀನಿ, ತಾನು ಸತ್ತರೆ ಅವರ ಮಗನಿಗೆ ಇನ್ನೊಂದು ಮದುವೆ ಮಾಡಬಹುದು ಎಂದು ಸದರಿ ವೈರಿನಿಂದ ತನ್ನ ಕುತ್ತಿಗೆಗೆ ಬಿಗಿದು ತನ್ನನ್ನು ಸಾಯಿಸಲು ಪ್ರಯತ್ನ ಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-11 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಮ್ಮ ಮನೆಗೆ ಬಂದ ಸರೋಜ ಎಂಬುವವರು ಆರೋಪಿಗಾದ ನಿಮ್ಮಿಂದ ಆಕೆಯನ್ನು ರಕ್ಷಿಸಿರುವುದಾಗಿ, ಸರೋಜ ತನ್ನನ್ನು ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದಾಗಿ, ಹೆಚ್ಚಿನ ವರದಕ್ಷಿಣೆ ಹಣ ಮತ್ತು ಒಡವೆ ತರುವ ವಿಷಯವಾಗಿ ಆರೋಪಿಗಳಾದ ನೀವು ತನಗೆ ಹಿಂಸೆ ಕಿರುಕುಳ ನೀಡುತ್ತಿದ್ದಾಗಿ, ತನಗೆ ಹಲ್ಲೆ ಮಾಡಿದ್ದರಿಂದ ಸುಸ್ತಾಗಿದ್ದು, ನಂತರ ಈ ವಿಷಯವಾಗಿ ತಾನು ಆರೋಪಿಗಳಾದ ನಿಮ್ಮ ವಿರುದ್ಧ ದಿಃ 28.09.2017 ರಂದು ರಾತ್ರಿ ಸುಮಾರು 9.00 ಗಂಟೆಗೆ ಚಿಕ್ಕಮಗಳೂರಿನ ಮಹಿಳಾ ಪೊಲೀಸ್ ಠಾಣೆಗೆ ನಿ.ಪಿ.1 ರಂತೆ ದೂರು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-12 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಗಳಾದ ನೀವು ತನ್ನನ್ನು ಸಾಯಿಸಿ 1 ನೇ ಆರೋಪಿಯಾದ ನಿನಗೆ ಇನ್ನೊಂದು ಹೆಣ್ಣು ತಂದು ಮದುವೆ ಮಾಡಿಕೊಡುವ ಸಲುವಾಗಿ ತನಗೆ ಹಲ್ಲೆ ಮಾಡಿದ್ದಾಗಿ, ತಾನು ದೂರನ್ನು ನೀಡಿದ ಮಾರನೇ ದಿನ ಪೊಲೀಸರು ಸಂಜೆ 7.00 ಗಂಟೆಗೆ ಆರೋಪಿಗಳಾದ ನಿಮ್ಮ ಮನೆಗೆ ಬಂದಿದ್ದಾಗಿ, ಆಗ ಅಲ್ಲಿ ನೀವು ಇರಲಿಲ್ಲ, ಮನೆಯನ್ನು ಬೀಗ ಹಾಕಿಕೊಂಡು ಹೋಗಿದ್ದಾಗಿ, ಪೊಲೀಸರು ನಿ.ಪಿ.2 ರಂತೆ ಕೃತ್ಯ ಸ್ಥಳದ ಮಹಜರ್ ಮಾಡಿದ್ದಾಗಿ, ನಿ.ಪಿ.3 ಮತ್ತು 4 ರಂತೆ 2 ಫೋಟೋ ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-13 ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 05.10.2017 ರಂದು ನಿ.ಪಿ.6 ರಿಂದ ನಿ.ಪಿ.11 ರಂತೆ ತನ್ನ ಮದುವೆಯ ಪತ್ರಿಕೆ, Marriage certificate, ಗಾಯವಾದ ಬಗ್ಗೆ ತೆಗೆದ ಫೋಟೋಗಳು, ಮದುವೆ ಕಾಲದಲ್ಲಿ ತಾಳಿ ಕಟ್ಟುವ ಸಮಯದಲ್ಲಿ ತೆಗೆದ ಫೋಟೋಗಳನ್ನು ಚಿಕ್ಕಮಗಳೂರಿನ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿ ಕೊಟ್ಟಿದ್ದಾಗಿ, ಅವುಗಳನ್ನು ಪೊಲೀಸರು ನಿ.ಪಿ.5 ರ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ

ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-14 ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಗಳಾದ ನೀವು ನ್ಯಾಯಾಲಯದ ಜಾಮೀನು ಪಡೆದು ಮನೆಗೆ ಹೋಗಿದ್ದಾಗಿ, ನಂತರ ದಿಃ 22.10.2017 ರಂದು ಮಧ್ಯಾಹ್ನ 12.00 ಗಂಟೆಗೆ ತಾನು ಪೊಲೀಸರನ್ನು ಕರೆದುಕೊಂಡು ಕೃತ್ಯ ಸ್ಥಳವನ್ನು ತೋರಿಸಲು ನಿಮ್ಮ ಮನೆಗೆ ಹೋಗಿದ್ದಾಗಿ, ಪೊಲೀಸರು ನಿ.ಪಿ.12 ರಂತೆ ಮಹಜರನ್ನು ಮಾಡಿದ್ದಾಗಿ, ನಿಮ್ಮ ಮನೆಯಲ್ಲಿ ತನಗೆ ಬರೆ ಹಾಕಿದ ಚಾಕು ಮತ್ತು ಕುತ್ತಿಗೆಗೆ ಬಿಗಿದ Charger ವೈರನ್ನು ಅಮಾನತ್ತು ಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-15 ಫ್ರಾ.ಸಾ.2 ಕೆ.ಹೆಚ್.ಡಿಸೋಜ ಇವರು ತಮ್ಮ ಸಾಕ್ಷ್ಯದಲ್ಲಿ ಅಂದಾಜು 2 ವರ್ಷಗಳ ಹಿಂದೆ ಸುಮಾರು ಸಂಜೆ 7.00 ಗಂಟೆಗೆ 3 ನೇ ಆರೋಪಿಯಾದ ಹುಚ್ಚೆಗೌಡರ ಮನೆಯ ಹತ್ತಿರ ಅವರ ಗೇಟಿನ ಮುಂಬಾಗದ ಜಾಗದಲ್ಲಿ ಸಿ.ಪಿ.ಐ ರವರು ಆತನನ್ನು ಮತ್ತು ಚಾಸಾ.3 ರವರನ್ನು ಕರೆಯಿಸಿ ಅಲ್ಲಿ ನಿ.ಪಿ.2 ರಂತೆ ಬರವಣಿಗೆ ಮಾಡಿದ ದಾಖಲೆಯ ಮೇಲೆ ಅವರ ಸಹಿಯನ್ನು ತೆಗೆದುಕೊಂಡಿದ್ದಾಗಿ ಮತ್ತು ಅದೇ ಸ್ಥಳದಲ್ಲಿ ಅವರನ್ನು ನಿಲ್ಲಿಸಿಕೊಂಡು ನಿ.ಪಿ.3 ಮತ್ತು 4 ರಂತೆ ಪೋಟೋಗಳನ್ನು ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-16 ಫ್ರಾ.ಸಾ.3 ರಾಘವೇಂದ್ರ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 05.10.2017 ರಂದು ಸಂಜೆ 5 ಗಂಟೆಗೆ ಆತನನ್ನು ಮತ್ತು ಧರ್ಮೇಗೌಡ ಎಂಬುವವರನ್ನು ಚಿಕ್ಕಮಗಳೂರಿನ ಟೌನ್ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಆರೋಪಿಗಳಾದ ನಿಮ್ಮ ಮತ್ತು ಪಿರ್ಯಾದಿ ಇವರ ನಡುವೆ ಗಲಾಟೆಯಾದ ಹಿನ್ನಲೆಯಲ್ಲಿ ಮಹಜರಿಗೆ ಪಂಚರಾಗಲು ಕರೆಸಿದ್ದಾಗಿ, ಆ ಸಮಯದಲ್ಲಿ ಪಿರ್ಯಾದಿ ಅವರ ಮದುವೆಯ ಪತ್ರಿಕೆ, ಮದುವೆಯ ಪೋಟೋಗಳು ಮತ್ತು ಅವರ ಕೈ ಮತ್ತು ಕಾಲುಗಳು, ಮತ್ತು

ಅವರ ಕುತ್ತಿಗೆಗೆ ಗಾಯವಾಗಿರುವ ಪೋಟೋಗಳನ್ನು ನಿ.ಪಿ.6 ರಿಂದ ನಿ-ಪಿ.11 ರಂತೆ ಪೊಲೀಸರಿಗೆ ಹಾಜರು ಪಡಿಸಿದ್ದಾಗಿ, ಅವುಗಳನ್ನು ಪೊಲೀಸರು ತಮ್ಮ ಸಮಕ್ಷಮ ನಿ.ಪಿ.5 ರ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-17 ಫ್ರಾ.ಸಾ.4 ಧರ್ಮೇಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 05.10.2017 ರಂದು ಸಂಜೆ 5.00 ಗಂಟೆಗೆ ತನಗೆ ಪೊಲೀಸರು ಠಾಣೆಗೆ ಬರಲು ಹೇಳಿದ್ದಾಗಿ, ಅದರಂತೆ ಸಂಜೆ 5 ಗಂಟೆಗೆ ಪೊಲೀಸ್ ಠಾಣೆಗೆ ಆತ ಹೋಗಿದ್ದಾಗಿ, ಆ ಸಮಯದಲ್ಲಿ ಠಾಣೆಯಲ್ಲಿ ಫ್ರಾಸಾ.1, 1 ನೇ ಆರೋಪಿಯಾದ ನೀನು ಮತ್ತು ಆಕೆಯ ಮದುವೆಯ ಪತ್ರಿಕೆ, ಮದುವೆಯ ಪೋಟೋಗಳು ಮತ್ತು Marriage Certificate, ಆಕೆಯ ಕೈ ಮತ್ತು ಕಾಲುಗಳಿಗೆ ಬರೆ ಹಾಕಿರುವ ಪೋಟೋಗಳು ಮತ್ತು ಆಕೆಯ ಕುತ್ತಿಗೆಗೆ ಚಾರ್ಜರ್ ವೈರ್ ಹಾಕಿ ಬಿಗಿದಿರುವ ಬಗ್ಗೆ ತೆಗೆದ ಪೋಟೋಗಳನ್ನು ನಿ.ಪಿ.6 ರಿಂದ ನಿ-ಪಿ.11 ರಂತೆ ಪೊಲೀಸರು ನಿ.ಪಿ.5 ರಂತೆ ಪಂಚನಾಮೆ ಮಾಡಿ ವಶಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-18 ಫ್ರಾ.ಸಾ.5 ಮರಿಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ಆತನಿಗೆ ದಿಃ 22.10.2017 ರಂದು ಮಧ್ಯಾಹ್ನ 12.00 ಗಂಟೆಗೆ ಪೊಲೀಸರು ನಿ.ಪಿ.14 ರಂತೆ ನೋಟೀಸನ್ನು ನೀಡಿ, ಫ್ರಾಸಾ.1 ಮತ್ತು ಆರೋಪಿಗಳಾದ ನಿಮ್ಮ ನಡುವೆ ಗಲಾಟೆ ವಿಚಾರವಾಗಿ ಕೃತ್ಯದ ಸ್ಥಳವಾದ ಲಕ್ಷ್ಮೀಶನಗರಕ್ಕೆ ಬಂದು ಪಂಚರಾಗಲು ಕೇಳಿಕೊಂಡ ಮೇರೆಗೆ, ಸ್ಥಳಕ್ಕೆ ತಾನು ಮತ್ತು ಲಕ್ಷ್ಮಣಗೌಡ ಹೋಗಿದ್ದಾಗಿ, ಲಕ್ಷ್ಮೀಶನಗರದ 1 ನೇ ಕ್ರಾಸಿನಲ್ಲಿ 3 ನೇ ಆರೋಪಿಯಾದ ನಿನ್ನ ಮನೆಗೆ ಕರೆದುಕೊಂಡು ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-19 ಫ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಸ್ಥಳದಲ್ಲಿ ಕಾವ್ಯಶ್ರೀ ಇವರು ಪೊಲೀಸರಿಗೆ ಸ್ಥಳ ತೋರಿಸಿ ಒಂದು

ಮೊಬೈಲ್ ಚಾರ್ಜರ್ ವೈರು, ಒಂದು ಕಪ್ಪು ಹಿಡಿ ಇರುವ ಚಾಕು, ಇವುಗಳನ್ನು ಪೊಲೀಸರ ಮುಂದೆ ಹಾಜರುಪಡಿಸಿ, ಚಾಕುವಿನಿಂದ ಆಕೆಗೆ ಬರೆ ಹಾಕಿದರು ಮತ್ತು ಮೊಬೈಲ್ ಚಾರ್ಜರ್ ವೈರ್ ನಿಂದ ಕುತ್ತಿಗೆಗೆ ಬಿಗಿದಿದ್ದರು ಎಂದು ಹೇಳಿ ಹಾಜರು ಪಡಿಸಿದ್ದಾಗಿ, ಸದರಿ ವಸ್ತುಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ಸದರಿ ಮು.ಮಾ.1 ಚಾರ್ಜರ್ ವೈರನ್ನು ಮತ್ತು ಮು.ಮಾ.2 ಚಾಕುವನ್ನು ಬಿಳಿ ಬಟ್ಟೆಯಲ್ಲಿ ಹಾಕಿ ಸೀಲು ಮಾಡಿ, ನಿ.ಪಿ.12 ರಂತೆ ಸದರಿ ಸ್ಥಳದಲ್ಲಿಮಧ್ಯಾಹ್ನ 12.00 ರಿಂದ 1.00 ಗಂಟೆ ವರೆಗೆ ಮಹಜರನ್ನು ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-20 ಪ್ರಾ.ಸಾ.6 ಸರೋಜ ಇವರು ತಮ್ಮ ಸಾಕ್ಷ್ಯದಲ್ಲಿ, ಆಕೆಯ ಅತ್ತಿಗೆ ಮಂಜುಳಾ ಮತ್ತು ರಾಜೇಗೌಡ ಇವರಿಗೆ 4 ಜನ ಮಕ್ಕಳು ಇರುವುದಾಗಿ, ಪ್ರಾಸಾ.1 ಇವರು ಅವರಿಗೆ 2 ನೇ ಮಗಳು, ಪ್ರಾಸಾ.1 ರನ್ನು 3 ನೇ ಆರೋಪಿಯಾದ ನಿನ್ನ ಮಗ 1 ನೇ ಆರೋಪಿಯಾದ ನಿನಗೆ ಮದುವೆ ಮಾಡಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-21 ಪ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮದುವೆ ಮತುಕತೆಯ ಸಮಯದಲ್ಲಿ ಆರೋಪಿಗಳಾದ ನೀವು 500gm ಚಿನ್ನವನ್ನು ಕೇಳಿದ್ದಾಗಿ, ಹುಡುಗಿಗೆ 2 ಬಳೆ, ನೆಕ್ ಲೇಸ್, 2 ಉಂಗುರ ಇವುಗಳನ್ನು ಹಾಕಿ ಮದುವೆ ಮಾಡಿಕೊಟ್ಟಿದ್ದಾಗಿ ಮತ್ತು 1 ನೇ ಆರೋಪಿಯಾದ ನಿನಗೆ ಕೊರಳ ಚಿನ್ನದ ಸರವನ್ನು ಹಾಕಿದ್ದಾಗಿ, ಪ್ರಾಸಾ.1 ಮತ್ತು 1 ನೇ ಆರೋಪಿಯಾದ ನಿನ್ನ ಮದುವೆಯನ್ನು ದಿಃ 04.03.2013 ರಂದು ಹಾಸನ ಜಿಲ್ಲೆಯ ಹಳೇಬಿಡಿನ ಶ್ರೀ ರಾಮದೇವರ ದೇವಸ್ಥಾನದಲ್ಲಿ ಮಾಡಿಕೊಟ್ಟಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-22 ಪ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮದುವೆಯಾದ ನಂತರ ಚಾಸಾ.1 ತನ್ನ ಗಂಡನ ಮನೆಯಲ್ಲಿ ವಾಸವಾಗಿದ್ದಾಗಿ, ಮದುವೆಯಾದ ನಂತರ 1 ನೇ ಆರೋಪಿಯಾದ

ನೀನು London ಗೆ ಹೋಗಬೇಕಾಗಿ ಬಂದಿದ್ದರಿಂದ ನಿನ್ನ ಜೊತೆ ಹೋಗಲು ನಿನ್ನ ಮನೆಯವರು ಕಳುಹಿಸಲಿಲ್ಲ, ಫ್ರಾಸಾ.1 ರವರು ನಿಮ್ಮ ಮನೆಯಲ್ಲಿ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-23 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಫ್ರಾಸಾ.1 ರವರು ವರದಕ್ಷಿಣೆ ತರಲಿಲ್ಲ ಎನ್ನುವ ಕಾರಣಕ್ಕೆ ಅವಳನ್ನು 1 ನೇ ಆರೋಪಿಯಾದ ನಿನ್ನ ಜೊತೆ London ಗೆ ಕಳುಹಿಸಲಿಲ್ಲ, ನಂತರ 1 ವರ್ಷವಾದ ಮೇಲೆ ಫ್ರಾಸಾ.1, 1 ನೇ ಆರೋಪಿಯಾದ ನಿನ್ನ ಜೊತೆ ಹೋಗಲೇ ಬೇಕು ಎಂದು ನಿಮ್ಮನ್ನು ಕೇಳಿಕೊಂಡಿದ್ದರಿಂದ, ನೀವು ಅವಳನ್ನು London ಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-24 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು London ನಲ್ಲಿ ಇದ್ದಾಗ 2 ರಿಂದ 4 ಆರೋಪಿಗಳಾದ ನೀವು ಫ್ರಾಸಾ.1 ರವರಿಗೆ ಫೋನ್ ಮಾಡಿ ಕಿರುಕುಳ ಕೊಡುತ್ತಿದ್ದಾಗಿ ಮತ್ತು ಗಂಡ ಹೆಂಡತಿ ಸರಿಯಾಗಿ ಇರಲು ಬಿಡುತ್ತಿರಲಿಲ್ಲ ಎಂದು ತನಗೆ ಫ್ರಾಸಾ.1 ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-25 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ London ನಿಂದ ಫ್ರಾಸಾ.1 ಮತ್ತು 1 ನೇ ಆರೋಪಿಯಾದ ನೀನು ಚಿಕ್ಕಮಗಳೂರಿಗೆ ಬಂದಿದ್ದಾಗಿ, ಚಿಕ್ಕಮಗಳೂರಿನಲ್ಲಿಯು ಸಹ ಗಲಾಟೆಯಾಗಿದ್ದು, ಆರೋಪಿಗಳಾದ ನಿಮ್ಮ ವಿರುದ್ಧ ಫ್ರಾಸಾ.1 ಚಿಕ್ಕಮಗಳೂರಿನ ನಗರ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದಾಗಿ, ಸದರಿ ದೂರು ಠಾಣೆಯಲ್ಲಿ ರಾಜೀಯಾಗಿ ನಂತರ ನಾವೆಲ್ಲರು ಸೇರಿ ಫ್ರಾಸಾ.1 ರವರನ್ನು ಅವಳ ಗಂಡನ ಮನೆಗೆ ಕಳುಹಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-26 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಫ್ರಾಸಾ.1 ಮತ್ತು ಅವಳ ಗಂಡ 1 ನೇ ಆರೋಪಿಯಾದ ನೀನು ಬೆಂಗಳೂರಿಗೆ ಹೋಗಿ ವಾಸ ಮಾಡಿದ್ದಾಗಿ, ಆ ಸಮಯದಲ್ಲಿ ಫ್ರಾಸಾ.1 ಗರ್ಭಾವತಿಯಾಗಿದ್ದಾಗಿ, ನಂತರ ತಾವೆಲ್ಲರು ಅವಳ ಸೀಮಂತವನ್ನು ಮಾಡಿ ಫ್ರಾಸಾ.1 ರನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಬಂದಿದ್ದಾಗಿ, ನಂತರ ಫ್ರಾಸಾ.1 ರವರು ಒಂದು ಗಂಡು ಮಗುವಿಗೆ ಜನ್ಮ ನೀಡಿದ್ದಾಗಿ ಮತ್ತು 9 ತಿಂಗಳುಗಳ ಕಾಲ ಆಕೆ ಆಕೆಯ ತಂದೆಯ ಮನೆಯಲ್ಲಿ ಇದ್ದುದಾಗಿ, ನಂತರ ಅವಳನ್ನು ಬೆಂಗಳೂರಿನಲ್ಲಿ ಇರುವ ಅವಳ ಗಂಡನ ಮನೆಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-27 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಒಂದು ದಿನ 2017 ರಲ್ಲಿ ಫ್ರಾಸಾ.1 ರವರ ತಂಗಿಯ ಮಗುವಿನ Birthday ಇದ್ದು, ಮಗುವಿಗೆ gift ಕೊಡಿಸುವ ವಿಚಾರದಲ್ಲಿ ಆಕೆ ಮತ್ತು 1 ನೇ ಆರೋಪಿಯಾದ ನೀನು ಜಗಳವಾಡಿದ್ದಾಗಿ, ಜಗಳದ ಸಮಯದಲ್ಲಿ 1 ನೇ ಆರೋಪಿಯಾದ ನೀನು ಆಕೆಯ ಕುತ್ತಿಗೆಗೆ ವೈರನ್ನು ಬಿಗಿದು ಕೊಲೆ ಮಾಡುವ ಉದ್ದೇಶದಿಂದ ಗಾಯ ಮಾಡಿದ್ದು, ಅವಳಿಗೆ Victoria ಆಸ್ಪತ್ರೆಗೆ ಸೇರಿಸಲಾಗಿದ್ದಾಗಿ, ನಂತರ ಆಕೆ ಬೆಂಗಳೂರಿನಲ್ಲಿ ದೂರು ನೀಡಿದ್ದಾಗಿ, ಸದರಿ ದೂರು ಕೂಡ ಠಾಣೆಯಲ್ಲಿ ರಾಜೀಯಾಗಿ ಆಕೆಯನ್ನು 2 ಮತ್ತು 3 ನೇ ಆರೋಪಿಗಳಾದ ನಿಮ್ಮ ಮನೆಯಲ್ಲಿ ಬಿಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-28 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆ ಸಮಯದಲ್ಲಿ ಫ್ರಾಸಾ.1 ಚಿಕ್ಕಮಗಳೂರಿನ ಒಂದು ಕಾಲೇಜಿಗೆ ಉಪನ್ಯಾಸಕಿಯಾಗಿ ಹೋಗುತ್ತಿದ್ದಾಗಿ, ಆಕೆಯ ಅತ್ತೆ ಮಾವನ ಮನೆಯಲ್ಲಿಯು ಸಹ ವರದಕ್ಷಿಣೆಯ ವಿಚಾರವಾಗಿ ಕಿರುಕುಳ ಕೊಡುತ್ತಿದ್ದರ ವಿಷಯವನ್ನು ತನಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-29 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ 27.09.2017 ರಂದು ಮಧ್ಯಾಹ್ನ 12.30 ಗಂಟೆಗೆ ಫ್ರಾಸಾ.1 ರವರು ಕಾಲೇಜಿನಿಂದ ಊಟಕ್ಕೆ ಮನೆಗೆ ಬಂದಿದ್ದು, ಆ ಸಮಯದಲ್ಲಿ ತಾನು ಸಹ ಅವರ ಮನೆಗೆ ಹೋಗಿದ್ದಾಗಿ, ಆಗ ಅವರ ಮನೆಯಲ್ಲಿ ಗಲಾಟೆಯಾಗುತ್ತಿದ್ದುದಾಗಿ, 2 ಮತ್ತು 3 ನೇ ಆರೋಪಿತರಾದ ನೀವು ಆಕೆಯ ಎಡಕೈಗೆ ಮತ್ತು ಬಲಕಾಲಿಗೆ ಚಾಕುವಿನಿಂದ ಬರೇ ಹಾಕಿದ್ದಾಗಿ, ಚಾಕುವನ್ನು 2 ನೇ ಆರೋಪಿಯಾದ ನೀನು ಹಿಡಿದುಕೊಂಡಿದ್ದಾಗಿ ಮತ್ತು Mobile Charger ವೈರಿನಿಂದ ಅವಳ ಕುತ್ತಿಗೆಗೆ ಬಿಗಿದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-30 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾನು ಫ್ರಾಸಾ.1 ರವರನ್ನು ಕರೆದುಕೊಂಡು ತನ್ನ ಸ್ಕೂಟಿಯ ಮೇಲೆ ಕೂರಿಸಿಕೊಂಡು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿದ್ದಾಗಿ, ವಿಷಯವನ್ನು ಆಕೆಯ ತಂದೆ ತಾಯಿಗೆ ಫೋನ್ ಮಾಡಿ ತಿಳಿಸಿದ್ದಾಗಿ, ನಂತರ ಫ್ರಾಸಾ.1 ರವರ ತಂದೆ ತಾಯಿ ಬಂದು ಆಕೆಯನ್ನು ನೋಡಿ ಆರೋಪಿಗಳಾದ ನಿಮ್ಮ ವಿರುದ್ಧ ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದಾಗಿ, ಆ ಕುರಿತಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-31 ಫ್ರಾ.ಸಾ.6 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು 4 ನೇ ಆರೋಪಿಯಾದ ನೀನು 1 ರಿಂದ 3 ನೇ ಆರೋಪಿಗಳಿಗೆ ಫೋನ್ ಮಾಡಿ ಫ್ರಾಸಾ.1 ರವರನ್ನು ಮನೆಯಿಂದ ಹೆಚ್ಚಿನ ವರದಕ್ಷಿಣೆ ಹಣ ತರಿಸಿ ಎಂದು ಅವರಿಗೆ ಹೇಳುತ್ತಿದ್ದಾಗಿ ಫ್ರಾಸಾ.1 ತನಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-32 ಫ್ರಾ.ಸಾ.7 ಮಂಜುಳಾ, ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತನಗೆ 4 ಜನ ಹೆಣ್ಣು ಮಕ್ಕಳು, ತನ್ನ 2 ನೇ ಮಗಳು

ಫ್ರಾಸಾ.1 ರವರನ್ನು ಮದುವೆ ಮಾಡಲೆಂದು ನಿಶ್ಚಯ ಮಾಡಿದಾಗ ಅವರ ಸಂಬಂಧಿಕರಾದ ಅಜ್ಜೇಗೌಡ ಜೆ.ಕೆ ಅವರು ನಿಮ್ಮ ಸಂಬಂಧವನ್ನು ಅವರಿಗೆ ತೋರಿಸಿದ್ದಾಗಿ, ಆಗ ಅವರು ಬೀರೂರಿನಲ್ಲಿ ವಾಸವಾಗಿದ್ದಾಗಿ, ನಂತರ ಅವರು ಹುಡುಗನ ಮನೆಗೆ ಹೋಗಿ ನೋಡಿ ಅವರಿಗೆ ಒಪ್ಪಿಗೆಯಾಗಿದ್ದರಿಂದ ಮದುವೆ ಫ್ರಾಸಾಪಕ್ಕೆ ಒಪ್ಪಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-33 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮದುವೆಯ ಮಾತುಕತೆ ಬೀರೂರಿನ ಅವರ ಮನೆಯಲ್ಲಿ ಆಗಿದ್ದಾಗಿ, ಮದುವೆಯ ಮಾತುಕತೆ ಸಮಯದಲ್ಲಿ ಅವರ ಕಡೆಯಿಂದ ಅಜ್ಜೇಗೌಡ ಮತ್ತು ಹುಡುಗನ ಕಡೆಯಿಂದ ನಿನ್ನ ತಂದೆ ತಾಯಿ ಮತ್ತು ಅಕ್ಕ ಬಂದಿದ್ದಾಗಿ, ಮದುವೆಯ ಮಾತುಕತೆ ಸಮಯದಲ್ಲಿ ಆರೋಪಿಗಳು 500gm ಬಂಗಾರವನ್ನು ವರದಕ್ಷಿಣೆಯಾಗಿ ಕೊಡಲು ಕೇಳಿದಾಗಿ, ಅದಕ್ಕೆ ತಾವು ಅಷ್ಟು ಕೊಡಲು ಆಗುವುದಿಲ್ಲ, ಹುಡುಗನಿಗೆ ಒಂದು Gold Chain ಮತ್ತು ಮಗಳಿಗೆ ಎಷ್ಟು ಸಾಧವಾಗುತ್ತದೋ ಅಷ್ಟು ಬಂಗಾರ ಹಾಕುತ್ತೇವೆ ಎಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-34 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಮದುವೆ ಮಾತುಕತೆಯಾಗಿ ದಿಃ 04.03.2013 ರಂದು ಹಾಸನ ಜಿಲ್ಲೆಯ ಹಳೇಬೀಡಿನ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಫ್ರಾಸಾ.1 ರವರನ್ನು 1 ನೇ ಆರೋಪಿಯಾದ ನಿನಗೆ ಮದುವೆ ಮಾಡಿಕೊಟ್ಟಿದ್ದಾಗಿ, ಮದುವೆ ಮಾತುಕತೆ ಸಂದರ್ಭದಲ್ಲಿ ಆದ ಮಾತಿನಂತೆ ಮದುವೆ ದಿನ ತಾವು ಹುಡುಗನಿಗೆ ಒಂದು ಬಂಗಾರದ ಸರ, ನಮ್ಮ ಮಗಳಿಗೆ ಒಂದು ಜೊತೆ ಬಳೆ, ಒಂದು ನೆಕ್ ಲೇಸ್, 2 ಜೊತೆ ಓಲೆ, 2 ಉಂಗುರಗಳನ್ನು ಹಾಕಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-35 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮದುವೆಯಾದ ನಂತರ ತಮ್ಮ ಮಗಳು ಗಂಡನ ಜೊತೆ ಅವರ ಮನೆಯಲ್ಲಿ ವಾಸವಾಗಿದ್ದಾಗಿ, ನಂತರ ಕಾವ್ಯಶ್ರೀ ಗಂಡ 1 ನೇ ಆರೋಪಿಯಾದ ನೀನು London ಗೆ ಹೋಗಬೇಕಾಗಿ ಬಂದಾಗ, ಫ್ರಾಸಾ.1 ನಿನ್ನ ಜೊತೆಯಲ್ಲಿ London ಗೆ ಹೋಗುತ್ತೇನೆ ಎಂದಾಗ ನಿನ್ನ ಮನೆಯವರು ಹೆಚ್ಚಿನ ವರದಕ್ಷಿಣೆ ತಂದಿರುವುದಿಲ್ಲ ಎಂಬ ಕಾರಣದಿಂದ ಅವಳನ್ನು 1 ನೇ ಆರೋಪಿಯಾದ ನಿನ್ನ ಜೊತೆ ಕಳಿಹಿಸಲಿಲ್ಲ, ಆ ರೀತಿ ತನ್ನ ಮಗಳು ಕಾವ್ಯಶ್ರೀ 2 ಮತ್ತು 3 ನೇ ಆರೋಪಿಯಾದ ನಿಮ್ಮ ಮನೆಯಲ್ಲಿ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-36 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, 1 ವರ್ಷವಾದ ಮೇಲೆ ಫ್ರಾಸಾ.1 ಗಂಡನ ಜೊತೆ ಹೋಗಲೇ ಬೇಕು ಎಂದು 2 ಮತ್ತು 3 ನೇ ಆರೋಪಿತರಾದ ನಿಮ್ಮ ಕಾಲು ಹಿಡಿದು ಕೇಳಿಕೊಂಡಿದ್ದರಿಂದ, ನೀವು ಅವಳನ್ನು London ಗೆ ಕಳುಹಿಸಿಕೊಟ್ಟಿದ್ದಾಗಿ, ಆಕೆ ಗಂಡನ ಜೊತೆಯಲ್ಲಿ ಸುಮಾರು 6 ತಿಂಗಳು ಕಾಲ London ನಲ್ಲಿ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-37 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ London ನಿಂದ ಫ್ರಾಸಾ.1 ಮತ್ತು 1 ನೇ ಆರೋಪಿಯಾದ ನೀನು ಚಿಕ್ಕಮಗಳೂರಿಗೆ ನಿಮ್ಮ ಮನೆಗೆ ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-38 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ದಿಃ23.08.2015 ರಂದು 1 ನೇ ಆರೋಪಿಯಾದ ನೀನು ತನ್ನ ಮಗಳನ್ನು ಸಿಕ್ಕಾ ಪಟ್ಟೆ ಹೊಡೆದಿದಾಗಿ ಮತ್ತು 2 ಮತ್ತು 3 ನೇ ಆರೋಪಿಗಳಾದ ನೀವು ಆಕೆಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕೊಟ್ಟಿದ್ದಾಗಿ, ಸದರಿ ವಿಚಾರವಾಗಿ 1 ರಿಂದ 3 ನೇ ಆರೋಪಿಗಳಾದ ನಿಮ್ಮ ವಿರುದ್ಧ ಚಿಕ್ಕಮಗಳೂರಿನ ನಗರ

ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದಾಗಿ, ಠಾಣೆಯಲ್ಲಿ ಸದರಿ ವಿಚಾರವಾಗಿ 2 ಕಡೆಯವರನ್ನು ಕರೆಯಿಸಿ ರಾಜೀ ಪಂಚಾಯಿತಿ ಮಾಡಿ ತನ್ನ ಮಗಳನ್ನು ನಿಮ್ಮ ಮನೆಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-39 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ 1 ನೇ ಆರೋಪಿಯಾದ ನೀನು ತನ್ನ ಮಗಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಸಂಸಾರ ಮಾಡಿದ್ದಾಗಿ, ಆ ಸಮಯದಲ್ಲಿ ಆಕೆ ಗರ್ಭಿಣಿಯಾಗಿದ್ದಾಗಿ, ನಂತರ ತಾವೆಲ್ಲರು ಆಕೆಯ ಸೀಮಂತವನ್ನು ಮಾಡಿ ಕಾವ್ಯಶ್ರೀಯನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಬಂದಿದ್ದಾಗಿ, ದಿಃ 16.06.2016 ರಲ್ಲಿ ಒಂದು ಗಂಡು ಮಗುವಿಗೆ ಜನ್ಮ ನೀಡಿದ್ದಾಗಿ ಮತ್ತು 9 ತಿಂಗಳು ಕಾಲ ನಮ್ಮ ಮನೆಯಲ್ಲಿ ಇದ್ದು, ಬಾಣಂತಿತನ ಮುಗಿದ ಮೇಲೆ ಆಕೆಯನ್ನು 1 ನೇ ಆರೋಪಿಯಾದ ನೀನು ಬೆಂಗಳೂರಿನ ಮನೆಗೆ ಕರೆದುಕೊಂಡು ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-40 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ದಿಃ07.05.2017 ರಲ್ಲಿ ತನ್ನ 3 ನೇ ಮಗಳ ಮಗುವಿನ Birthday ಇದ್ದು, ಆ ಮಗುವಿಗೆ gift ಕೊಡಿಸುವ ವಿಚಾರದಲ್ಲಿ ಫ್ರಾಸಾ.1 ರವರ ಜೊತೆ 1 ನೇ ಆರೋಪಿಯದ ನೀನು ಜಗಳ ಮಾಡಿದ್ದಾಗಿ, ಆ ಸಮಯದಲ್ಲಿ 1 ನೇ ಆರೋಪಿಯಾದ ನೀನು ತನ್ನ ಮಗಳ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡುವ ಪ್ರಯತ್ನಿಸಿದಾಗ ಆಕೆ ತಪ್ಪಿಸಿಕೊಂಡು ಬೆಂಗಳೂರಿನ Victoria ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದಾಗಿ, ಸದರಿ ವಿಚಾರವನ್ನು ತಮಗೆ ಫ್ರಾಸಾ.1 ರವರು ಫೋನ್ ಮೂಲಕ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-41 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಅಜ್ಜೇಗೌಡರು ಮತ್ತು ಆಕೆಯ ಗಂಡ ಬೆಂಗಳೂರಿಗೆ ಹೋಗಿ 1 ನೇ

ಆರೋಪಿಯಾದ ನಿನ್ನ ವಿರುದ್ದ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾಗಿ, ಆ ದೂರಿನ ಕುರಿತಂತೆ ರಾಜೀ ಮಾಡಿ ನಂತರ ತನ್ನ ಮಗಳನ್ನು ವಾಪಸ್ಸು 1 ನೇ ಆರೋಪಿಯಾದ ನಿನ್ನ ಮನೆಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-42 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತನ್ನ ಮಗಳನ್ನು ಬೆಂಗಳೂರಿನಿಂದ ಕರೆದುಕೊಂಡು ಬಂದು ಚಿಕ್ಕಮಗಳೂರಿನ ನಿಮ್ಮ ಮನೆಯಲ್ಲಿ ಬಿಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-43 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಫ್ರಾಸಾ.1 ರವರು ಚಿಕ್ಕಮಗಳೂರಿನ ಎಂ.ಇ.ಎಸ್. ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-44 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, 4 ನೇ ಆರೋಪಿಯಾದ ನೀನು 2 ಮತ್ತು 3 ನೇ ಆರೋಪಿಗಳಿಗೆ ಫೋನ್ ಮಾಡಿ ಫ್ರಾಸಾ.1 ರವರಿಗೆ ವರದಕ್ಷಿಣೆಯ ವಿಚಾರವಾಗಿ ಹಿಂಸೆ ನೀಡುವಂತೆ ಪ್ರೇರೇಪಿಸಿದ್ದಾಗಿ, ಅದರಂತೆ ನೀವು ಆಕೆಗೆ ಕಿರುಕುಳ ನೀಡುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-45 ಫ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ 27.09.2017 ರಂದು ಮಧ್ಯಾಹ್ನ 1.30 ಗಂಟೆಗೆ ತನ್ನ ಸಂಬಂಧಿಕಳಾದ ಸರೋಜ ಫೋನ್ ಮಾಡಿ 2 ಮತ್ತು 3 ನೇ ಆರೋಪಿಗಳಾದ ನೀವು ಫ್ರಾಸಾ.1 ರವರಿಗೆ ಚಾಕುವಿನಿಂದ ಕೈ

ಮತ್ತು ಕಾಲಿಗೆ ಬರೇ ಹಾಕಿ, ಅವಳ ಕುತ್ತಿಗೆಗೆ ಮೊಬೈಲ್ Charger ವೈರಿನಿಂದ ಬಿಗಿದು ಅವಳನ್ನು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದಾಗಿ, ಆಕೆ ಗಲಾಟೆಯನ್ನು ಬಿಡಿಸಿ ನಂತರ ಆಕೆಯ ಸ್ಕೂಟಿಯ ಮೇಲೆ ಪ್ರಾಸಾ.1 ರವರನ್ನು ಚಿಕ್ಕಮಗಳೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುವ ವಿಷಯವನ್ನು ತಿಳಿಸಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-46 ಪ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ವಿಷಯವನ್ನು ತಿಳಿದು ತಾನು ಮತ್ತು ತನ್ನ ಗಂಡ ರಾಜೇಗೌಡರು ಆಸ್ಪತ್ರೆಗೆ ಹೋಗಿ ಪ್ರಾಸಾ.1 ರವರನ್ನು ವಿಚಾರಿಸಿದಾಗ,2 ಮತ್ತು 3 ನೇ ಆರೋಪಿಗಳಾದ ನೀವು ವರದಕ್ಷಿಣೆ ತರಲಿಲ್ಲ ಎನ್ನುವ ವಿಚಾರವಾಗಿ ಆಕೆಯ ಎಡಗೈ ಮತ್ತು ಬಲಗಾಲಿಗೆ ಚಾಕುವಿನಿಂದ ಬರೇ ಹಾಕಿ, ಮೊಬೈಲ್ ಚಾರ್ಜರ್ ವೈರಿನಿಂದ ಕುತ್ತಿಗೆಗೆ ಬಿಗಿದು ಕೊಲೆ ಮಾಡುವ ಪ್ರಯತ್ನ ಮಾಡಿದ್ದಾಗಿ ಮತ್ತು ಆಕೆ ಸತ್ತರೇ 1 ನೇ ಆರೋಪಿಯಾದ ನಿನಗೆ ಇನ್ನೊಂದು ಮದುಗೆ ಮಾಡುತ್ತೇನೆ ಎಂದು ಹೇಳಿ ಆಕೆಯ ಬೆನ್ನಿಗೆ ಗುದ್ದಿದ್ದಾಗಿ, ಈ ವಿಚಾರವಾಗಿ ಮಹಿಳಾ ಪೊಲೀಸ್ ಠಾಣೆಯಲ್ಲಿ 1 ರಿಂದ 4 ನೇ ಆರೋಪಿಗಳಾದ ನಿಮ್ಮ ವಿರುದ್ಧ ದೂರು ನೀಡಿದ್ದಾಗಿ, ದಿಃ 29.09.2017 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-47 ಪ್ರಾ.ಸಾ.7 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಪ್ರಾಸಾ.1 ರವರಿಗೆ ಮದುವೆಯಾದ ನಂತರ ವರದಕ್ಷಿಣೆಯ ವಿಚಾರವಾಗಿ 1 ರಿಂದ 4 ಆರೋಪಿಗಳಾದ ನೀವು ಹಿಂಸೆ ಕಿರುಕುಳ ನೀಡಿದ್ದಾಗಿ ಮತ್ತು 2 ಮತ್ತು 3 ನೇ ಆರೋಪಿಗಳಾದ ನೀವು ಚಾಕುವಿನಿಂದ ಆಕೆಯ ಕೈ ಮತ್ತು ಕಾಲಿಗೆ ಬರೇ ಹಾಕಿ ಅವಳ ಕುತ್ತಿಗೆಗೆ ಮೊಬೈಲ್ ಚಾರ್ಜರ್ ವೈರಿನಿಂದ ಬಿಗಿದು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-48 ಪ್ರಾ.ಸಾ.8 ಎ.ಹೆಚ್.ರಾಜೇಗೌಡ ಇವರು ತಮ್ಮ ಸಾಕ್ಷ್ಯದಲ್ಲಿ ತನಗೆ 4 ಜನ ಹೆಣ್ಣು ಮಕ್ಕಳು ಇರುವುದಾಗಿ, ಆತನ 2 ನೇ ಮಗಳು ಕಾವ್ಯಶ್ರೀರವರ ಮದುವೆ ಮಾಡಲು ನಿಶ್ಚಯಿಸಿದ್ದಾಗಿ, ಆಗ ತನ್ನ ಸಂಬಂಧಿಕರಾದ ಶ್ರೀ ಅಜ್ಜೇಗೌಡ ಜೆ.ಕೆ ಇವರು ನಿಮ್ಮ ಸಂಬಂಧವನ್ನು ಅವರಿಗೆ ತೋರಿಸಿದ್ದಾಗಿ, ತಾವು ಬೀರೂರಿನಲ್ಲಿ ವಾಸವಾಗಿದ್ದಾಗಿ, ತನ್ನ ಮಗಳನ್ನು ನೋಡಲು 1 ರಿಂದ 4 ನೇ ಆರೋಪಿಗಳಾದ ನೀವು ಬಂದಿದ್ದಾಗಿ, ತನ್ನ ಮನೆಯಲ್ಲಿಯೇ ಮದುವೆ ಮಾತುಕತೆಯಾಗಿದ್ದಾಗಿ, ಮದುವೆಯ ಮಾತುಕತೆ ಸಮಯದಲ್ಲಿ ತಮ್ಮ ಕಡೆಯಿಂದ ಅಜ್ಜೇಗೌಡ ಮತ್ತು ಹುಡುಗನ ಕಡೆಯಿಂದ ನೀವುಗಳು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-49 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮದುವೆಯ ಮಾತುಕತೆ ಸಮಯದಲ್ಲಿ ಆರೋಪಿಗಳಾದ ನೀವು 500gm ಬಂಗಾರವನ್ನು ವರದಕ್ಷಿಣೆಯಾಗಿ ಕೊಡಲು ಕೇಳಿದ್ದಾಗಿ, ಅದಕ್ಕೆ ತಾವು ಅಷ್ಟು ಕೊಡಲು ಆಗುವುದಿಲ್ಲ, ತಮ್ಮ ಕೈಯಲ್ಲಿ ಎಷ್ಟು ಆಗುತ್ತದೋ ಅಷ್ಟು ಕೊಡುತ್ತೇವೆ ಎಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-50 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮದುವೆಯನ್ನು ದಿಃ04.03.2013 ರಂದು ಹಾಸನ ಜಿಲ್ಲೆಯ ಹಳೇಬೀಡಿನ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಪ್ರಾಸಾ.1 ರವರನ್ನು 1 ನೇ ಆರೋಪಿಯಾದ ನಿನಗೆ ಕೊಟ್ಟು ಮದುವೆ ಮಾಡಿದ್ದಾಗಿ, ಮದುವೆ ಸಂದರ್ಭದಲ್ಲಿ 1 ನೇ ಆರೋಪಿಯಾದ ನಿನಗೆ ಒಂದು ಬಂಗಾರದ ಸರ, ಪ್ರಾಸಾ.1 ರವರಿಗೆ ಒಂದು ಜೊತೆ ಬಳೆ, ಒಂದು ನೆಕ್ ಲೇಸ್, ಒಂದು ಜೊತೆ ಓಲೆ ಮತ್ತು 2 ಉಂಗುರಗಳನ್ನು ಹಾಕಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-51 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮದುವೆಯಾದ ನಂತರ ಫ್ರಾಸಾ.1 ಆಕೆಯು ಗಂಡನ ಜೊತೆ ಅವರ ಮನೆಯಲ್ಲಿ ವಾಸಮಾಡುತ್ತಿದ್ದಾಗಿ, ನಂತರ 1 ನೇ ಆರೋಪಿಯಾದ ನೀನು London ಗೆ ಹೋಗಬೇಕಾಗಿ ಬಂದಾಗ, ಫ್ರಾಸಾ.1 ನಿಮ್ಮ ಮನೆಯಲ್ಲಿ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-52 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಫ್ರಾಸಾ.1 ರವರು 1 ನೇ ಆರೋಪಿಯಾದ ನಿನ್ನ ಜೊತೆಯಲ್ಲಿ London ಗೆ ಹೋಗುತ್ತೇನೆ ಎಂದಾಗ ನೀವು 500 gm ಬಂಗಾರವನ್ನು ತಂದು ಕೊಡುವವರೆಗೂ ಆಕೆಯ ಗಂಡನ ಜೊತೆ London ಗೆ ಕಳುಹಿಸುವುದಿಲ್ಲ ಎಂದು ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-53 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, 1 ವರ್ಷ 2 ಮತ್ತು 3 ನೇ ಆರೋಪಿಗಳಾದ ನಿಮ್ಮ ಮನೆಯಲ್ಲಿ ಇದ್ದುದಾಗಿ, ನಂತರ 1 ವರ್ಷವಾದ ಮೇಲೆ ಫ್ರಾಸಾ.1 ರವರು 1 ನೇ ಆರೋಪಿಯಾದ ನಿನ್ನ ಜೊತೆ ಹೋಗಲೇ ಬೇಕು ಎಂದು ನಿಮ್ಮ ಕೈ ಕಾಲು ಹಿಡಿದು ಕೇಳಿಕೊಂಡಿದ್ದರಿಂದ ಆಕೆಯನ್ನು London ಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-54 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ London ನಿಂದ ಫ್ರಾಸಾ.1 ಮತ್ತು 1 ನೇ ಆರೋಪಿಯಾದ ನೀನು ಚಿಕ್ಕಮಗಳೂರಿಗೆ ನಿಮ್ಮ ಮನೆಗೆ ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-55 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ದಿಃ 23.08.2015 ರಂದು 1 ರಿಂದ 3 ನೇ ಆರೋಪಿಗಳಾದ ನೀವು

ಫ್ರಾಸಾ.1 ರವರಸ ಜೊತೆ ಜಗಳ ತೆಗೆದು ಆಕೆಗೆ ಹೊಡೆದು ಗಾಯ ಮಾಡಿದ್ದಾಗಿ, ಫ್ರಾಸಾ.1 ನಿಮ್ಮ ವಿರುದ್ಧ ಚಿಕ್ಕಮಗಳೂರಿನ ನಗರ ಠಾಣೆಗೆ ದೂರು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-56 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಠಾಣೆಯಲ್ಲಿ ಸದರಿ ವಿಚಾರವಾಗಿ 2 ಕಡೆಯವರನ್ನು ಕರೆಯಿಸಿ ರಾಜೀ ಪಂಚಾಯಿತಿ ಮಾಡಿ ಫ್ರಾಸಾ.1 ಮತ್ತು 1 ನೇ ಆರೋಪಿಯಾದ ನಿನ್ನನು ಒಂದು ಮಾಡಿ ನಿಮ್ಮ ಜೊತೆಯಲ್ಲಿ ಮನೆಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-57 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ 1 ನೇ ಆರೋಪಿಯಾದ ನೀನು ತನ್ನ ಮಗಳನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಸಂಸಾರ ಮಾಡಿದ್ದುದಾಗಿ, ಆ ಸಮಯದಲ್ಲಿ ಆತನ ಮಗಳು ಗರ್ಭಿಣಿಯಾಗಿದ್ದು ನಂತರ ತಾವೆಲ್ಲರು ಆಕೆಯ ಸೀಮಂತವನ್ನು ಮಾಡಿ ಆಕೆಯನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಬಂದಿದ್ದಾಗಿ, ನಂತರ ಅವರ ಮಗಳು ಕಾವ್ಯಶ್ರೀಗೆ ಚಿಕ್ಕಮಗಳೂರಿನ ಹೋಲಿ ಕ್ರಾಸ್ ಆಸ್ಪತ್ರೆಯಲ್ಲಿ ದಿಃ 16.06.2016 ರಲ್ಲಿ ಒಂದು ಗಂಡು ಮಗು ಆಗಿದ್ದಾಗಿ ಮತ್ತು 9 ತಿಂಗಳು ಕಾಲ ತಮ್ಮ ಮನೆಯಲ್ಲಿ ಇದ್ದು, ಬಾಣಂತಿತನ ಮುಗಿದ ಮೇಲೆ ಆಕೆಯನ್ನು 1 ನೇ ಆರೋಪಿಯಾದ ನೀನು ಬೆಂಗಳೂರಿನ ಮನೆಗೆ ಕರೆದುಕೊಂಡು ಹೋಗಿದ್ದಾಗಿ, ಬೆಂಗಳೂರಿಗೆ ಹೋದ ನಂತರ ಗಂಡ ಹೆಂಡತಿ ಸ್ವಲ್ಪ ದಿನ ಚೆನ್ನಾಗಿ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-58 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ದಿಃ07.05.2017 ರಂದು ಅವರ 3 ನೇ ಮಗಳ ಮಗುವಿನ Birthday ಇದ್ದು, ಆ ಮಗುವಿಗೆ gift ಕೊಡಿಸುವ ವಿಚಾರದಲ್ಲಿ ಕಾವ್ಯಶ್ರೀ ಮತ್ತು 1 ನೇ ಆರೋಪಿಯಾದ ನಿನ್ನ ನಡುವೆ ಗಲಾಟೆ

ಆಗಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ False

ಪ್ರಶ್ನೆ-59 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆ ಸಮಯದಲ್ಲಿ 1 ನೇ ಆರೋಪಿಯಾದ ನೀನು ಆತನ ಮಗಳ ಕುತ್ತಿಗೆಯನ್ನು ಹಿಸುಕಿ ಕೊಲೆ ಮಾಡಲು ಪ್ರಯತ್ನಿಸಿದಾಗ, ಆಗ ಆತನ ಮಗಳು ಬೆಂಗಳೂರಿನ Victoria ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ False

ಪ್ರಶ್ನೆ-60 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಅವಳು ಫೋನ್ ಮಾಡಿ ಅವರಿಗೆ ವಿಷಯ ತಿಳಿಸಿದ್ದು, ಅದರಂತೆ ಆತನು ಮತ್ತು ಅಜ್ಜೇಗೌಡರು ಬೆಂಗಳೂರಿಗೆ ಹೋಗಿ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ 1 ನೇ ಆರೋಪಿಯಾದ ನಿನ್ನ ವಿರುದ್ಧ ಅವರ ಮಗಳಿಂದ ದೂರು ಕೊಡಿಸಿದ್ದಾಗಿ, ಆ ದೂರಿನ ಕುರಿತಂತೆ ಠಾಣೆಯಲ್ಲಿ ರಾಜೀ ಮಾಡಿ ನಂತರ ಆತನ ಮಗಳನ್ನು ವಾಪಸ್ಸು ನಿನ್ನ ಮನೆಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-61 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಆತನ ಮಗಳನ್ನು ಬೆಂಗಳೂರಿನಿಂದ ಚಿಕ್ಕಮಗಳೂರಿನ ಅವಳ ಅತ್ತೆ, ಮಾವನ ಮನೆಯಲ್ಲಿ ಕರೆದುಕೊಂಡು ಬಂದು ಬಿಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ False

ಪ್ರಶ್ನೆ-62 ಫ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ಅವರ ಮಗಳು ಆಕೆಯ ಅತ್ತೆ ಮಾವನ ಮನೆಯಲ್ಲಿ ಇದ್ದ ಸಮಯದಲ್ಲಿ ಚಿಕ್ಕಮಗಳೂರಿನ ಹನುಮಂತಪ್ಪ ಸರ್ಕಲಿನಲ್ಲಿ ಇರುವ ಎಂ.ಇ.ಎಸ್. ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ

ಮಾಡುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-63 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆಗಲೂ ಸಹ 2 ಮತ್ತು 3 ನೇ ಆರೋಪಿಗಳು ಆತನ ಮಗಳು ಕಾವ್ಯಶ್ರೀಗೆ ವರದಕ್ಷಿಣೆಯ ವಿಚಾರವಾಗಿ ಮಾನಸಿಕ ಮತ್ತು ದೈಹಿಕ ಹಿಂಸೆ ಕೊಡುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-64 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, 4 ನೇ ಆರೋಪಿಯಾದ ನೀನು ನಿನ್ನ ತಂದೆ ತಾಯಿಯಾದ 2 ಮತ್ತು 3 ನೇ ಆರೋಪಿಗಳಿಗೆ ಫೋನ್ ಮಾಡಿ ತನ್ನ ಮಗಳಿಗೆ ವರದಕ್ಷಿಣೆಯ ವಿಚಾರವಾಗಿ ಹಿಂಸೆ ನೀಡುವಂತೆ ಪ್ರೇರೇಪಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-65 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ 27.09.2017 ರಂದು ಮಧ್ಯಾಹ್ನ 1.30 ಗಂಟೆಗೆ ಅವರ ಸಂಬಂಧಿಕರಾದ ಸರೋಜ ಎಂಬುವವರು ತನಗೆ ಫೋನ್ ಮಾಡಿ 2 ಮತ್ತು 3 ನೇ ಆರೋಪಿಗಳಾದ ನೀವು ಕಾವ್ಯಶ್ರೀಗೆ ಚಾಕುವಿನಿಂದ ಕೈ ಮತ್ತು ಕಾಲಿಗೆ ಬರೇ ಹಾಕಿ, ಅವಳ ಕುತ್ತಿಗೆಗೆ ಮೊಬೈಲ್ Charger ವೈರಿನಿಂದ ಬಿಗಿದು ಅವಳನ್ನು ಕೊಲೆ ಮಾಡಲು ಪ್ರಯತ್ನ ಪಟ್ಟಿದ್ದಾಗಿ, ನಂತರ 2 ನೇ ಆರೋಪಿಯಾದ ನೀನು ಕಾವ್ಯಶ್ರೀಯ ಬೆನ್ನಿಗೆ ಗುದ್ದಿದ್ದು, ನಂತರ ನೀವುಗಳು ಕಾವ್ಯಶ್ರೀಯನ್ನು ಕೊಲೆ ಮಾಡದೇ ಬಿಡುವುದಿಲ್ಲವೆಂದು ಮತ್ತು ಆಕೆ ಸತ್ತರೇ 1 ನೇ ಆರೋಪಿಗೆ ಬೇರೆ ಮದುವೆ ಮಾಡುತ್ತೇವೆ ಎಂದು ಗಲಾಟೆ ಮಾಡುತ್ತಿದ್ದಾಗ, ಸದರಿ ಸರೋಜ ಇವರು ಗಲಾಟೆಯನ್ನು ಬಿಡಿಸಿ ಆತನ ಮಗಳು ಕಾವ್ಯಶ್ರೀಯನ್ನು ಚಿಕ್ಕಮಗಳೂರಿನ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುವ ವಿಷಯವನ್ನು ಆತನಿಗೆ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-66 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ವಿಷಯವನ್ನು ತಿಳಿದು ತಕ್ಷಣ ತಾನು ಮತ್ತು ತನ್ನ ಹೆಂಡತಿ ಆಸ್ಪತ್ರೆಗೆ ಹೋಗಿ ತನ್ನ ಮಗಳನ್ನು ವಿಚಾರಿಸಿದಾಗ, ಆಕೆ ಅವಳ ಅತ್ತೆ ಮಾವ ವರದಕ್ಷಿಣೆ ತರಲಿಲ್ಲವೆಂದು, ಮಧ್ಯಾಹ್ನ ಊಟಕ್ಕೆ ಬಂದಿದ್ದಕ್ಕೆ ಊಟವೇನು ಪುಕಸಟ್ಟೆ ಸಿಗುತ್ತದೆಯಾ ಎಂದು ಬೈದು, 3 ನೇ ಆರೋಪಿ ಹುಚ್ಚೆಗೌಡರು ಚಾಕುವನ್ನು ಸ್ಟವ್ ವಲೆಯ ಮೇಲೆ ಕಾಯಿಸಿ ಆಕೆಯ ಎಡಗೈ ಮತ್ತು ಬಲಗಾಲಿಗೆ ಸದರಿ ಚಾಕುವಿನಿಂದ ಬರೇ ಹಾಕಿ, ಮೊಬೈಲ್ ಚಾರ್ಜರ್ ವೈರಿನಿಂದ ಆಕೆಯ ಕುತ್ತಿಗೆಗೆ ಬಿಗಿದು ಕೊಲೆ ಮಾಡುವ ಪ್ರಯತ್ನ ಮಾಡಿದ್ದಾಗಿ ಮತ್ತು 2 ನೇ ಆರೋಪಿಯಾದ ನೀನು ಆಕೆಯ ಕೈಗಳನ್ನು ಬಲವಾಗಿ ಹಿಡಿದುಕೊಂಡು ಆಕೆಯ ಬೆನ್ನಿಗೆ ನಿನ್ನ ಕೈಯಿಂದ ಬಲವಾಗಿ ಗುದ್ದಿದ್ದು, ನಂತರ 2 ಮತ್ತು 3 ನೇ ಆರೋಪಿಗಳಾದ ನೀವು ಆಕೆಯು ಸತ್ತರೇ 1 ನೇ ಆರೋಪಿಗೆ ಇನ್ನೊಂದು ಮದುವೆ ಮಾಡುತ್ತೇನೆ ಎಂದು ಹೇಳಿ ಹಲ್ಲೆ ಮಾಡಿರುವ ವಿಚಾರವನ್ನು ಆತನ ಮಗಳು ಹೇಳಿದ್ದಾಗಿ, ಗಲಾಟೆಯನ್ನು ಅವರ ಸಂಬಂಧಿಕರಾದ ಸರೋಜ ಇವರು ಬಿಡಿಸಿ ಅವಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ ಬಗ್ಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-67 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಈ ವಿಚಾರವಾಗಿ ತನ್ನ ಮಗಳ ಕಡೆಯಿಂದ ಚಿಕ್ಕಮಗಳೂರಿನ ಮಹಿಳಾ ಪೊಲೀಸ್ ಠಾಣೆಯಲ್ಲಿ 1 ರಿಂದ 4 ನೇ ಆರೋಪಿಗಳಾದ ನಿಮ್ಮ ವಿರುದ್ಧ ದೂರು ಕೊಡಿಸಿದ್ದಾಗಿ, ಈ ವಿಚಾರವಾಗಿ ತಾನು ಆರೋಪಿಗಳ ವಿರುದ್ಧ ದಿಃ29.09.2017 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-68 ಪ್ರಾ.ಸಾ.8 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು 4 ನೇ ಆರೋಪಿ ಶೀಲಾ ಇವಳು 2 ಮತ್ತು 3 ನೇ ಆರೋಪಿಗಳಿಗೆ ಫೋನ್ ಮಾಡಿ ತನ್ನ ಮಗಳಿಗೆ ವರದಕ್ಷಿಣೆಯ ವಿಚಾರವಾಗಿ ಹಿಂಸೆ ಕಿರುಕುಳ ನೀಡಿ ಕುಮ್ಮಕ್ಕು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ

ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-69 ಫ್ರಾ.ಸಾ.9 ಮೊಹಮ್ಮದ್ ಇಸಾಕ್, ಇವರು ತಮ್ಮ ಸಾಕ್ಷ್ಯದಲ್ಲಿ ನಿ.ಪಿ.16 ನೋಟೀಸನ್ನು ಫ್ರಾಸಾ.1 ಮತ್ತು ಆರೋಪಿತರ ನಡುವೆ ಆದ ಗಲಾಟೆಯ ವಿಚಾರದ ಬಗ್ಗೆ ಪೊಲೀಸರು ಸ್ಥಳಕ್ಕೆ ಬಂದಿದ್ದಾಗ ನೀಡಿದ್ದಾಗಿ, ಆ ಸಮಯದಲ್ಲಿ ರಾಜೇಗೌಡರ ಮಗಳು ಸ್ಥಳಕ್ಕೆ ಬಂದು ಸ್ಥಳವನ್ನು ತೋರಿಸುವ ಸಮಯದಲ್ಲಿ ಸದರಿ ಮನೆಯು ಲಾಕ್ ಆಗಿದ್ದರಿಂದ ಮನೆಯ ಮುಂದೆಯೇ ಸ್ಥಳ ತೋರಿಸಿದ್ದು, ಅದರ ವಿಚಾರವಾಗಿ ಒಂದು ನಿಪಿ.2 ರಂತೆ ಬರವಣಿಗೆ ಮಾಡಿ ಅದಕ್ಕೆ ತನ್ನ ಸಹಿ ಪಡೆದುಕೊಂಡಿದ್ದಾಗಿ ಅದೇ ಸ್ಥಳದಲ್ಲಿ ನಿ.ಪಿ.3 ಮತ್ತು 4 ಪೋಟೋಗಳನ್ನು ಅದೇ ವಿಚಾರವಾಗಿ ತೆಗೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-70 ಫ್ರಾ.ಸಾ.10 ಚಿತ್ರಕಲಾ, ಇವರು ತಮ್ಮ ಸಾಕ್ಷ್ಯದಲ್ಲಿ, ಕಾವ್ಯಶ್ರೀಯ ಮದುವೆ 1 ನೇ ಆರೋಪಿಯೊಂದಿಗೆ ದಿಃ 04.03.2013 ರಲ್ಲಿ ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನ, ಹಳೇಬೀಡು ಹೋಬಳಿ ರಾಮದೇವರಹಳ್ಳದಲ್ಲಿ ಇರುವ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಹಿಂದೂ ಸಂಪ್ರದಾಯದಂತೆ ಆಗಿದ್ದಾಗಿ, ಕಾವ್ಯಶ್ರೀಗೆ ಮದುವೆ ಸಂಬಂಧವನ್ನು ಅವರ ಮಾವನವರಾದ ಅಜ್ಜೇಗೌಡರವರು ಹುಡುಕಿ ಕೊಟ್ಟಿದ್ದಾಗಿ, ಕಾವ್ಯಶ್ರೀ ಮದುವೆ ಸಮಯದಲ್ಲಿ ಆಕೆಯ ತಂದೆ ತಾಯಿ ಮತ್ತು ಕಾವ್ಯಶ್ರೀ ಬೀರೂರಿನಲ್ಲಿ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-71 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮದುವೆ ಮಾತುಕತೆಗಾಗಿ ಆರೋಪಿಗಳಾದ ನಿಮ್ಮ ಕಡೆಯಿಂದ ನೀವು ತಮ್ಮ ಬೀರೂರಿನ ಮನೆಗೆ ಬಂದಿದ್ದಾಗಿ, ತಮ್ಮ ಕಡೆಯಿಂದ ತಾನು, ತನ್ನ ಮಾವ ಅಜ್ಜೇಗೌಡ, ತನ್ನ ತಂದೆ ತಾಯಿ ಮತ್ತು ಕಾವ್ಯಶ್ರೀ ಇದ್ದುದಾಗಿ, ಮದುವೆ ಮಾತುಕತೆಯಲ್ಲಿ ಆರೋಪಿಗಳಾದ ನೀವು 500 ಗ್ರಾಂ ಬಂಗಾರ ಕೊಡಬೇಕೆಂದು ತನ್ನ ತಂದೆ ತಾಯಿ ಮುಂದೆ ಬೇಡಿಕೆ ಇಟ್ಟದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-72 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆ ರೀತಿ ಮದುವೆ ಸಮಯದಲ್ಲಿ 1 ನೇ ಆರೋಪಿಗೆ ಅವರ ತಂದೆ ತಾಯಿಯು ಕಾವ್ಯಶ್ರೀಗೆ ಒಂದು ಚಿನ್ನದ ನೆಕ್ ಲೇಸ್, 2 ಚಿನ್ನದ ಬಳೆಗಳು, 2 ಜೊತೆ ಚಿನ್ನದ ಕಿವಿ ಓಲೆ, 2 ಚಿನ್ನದ ಉಂಗುರಗಳು ಮತ್ತು ಹುಡುಗನಿಗೆ ಅಂದರೆ 1 ನೇ ಆರೋಪಿಗೆ ಒಂದು ಚಿನ್ನದ ಕೊರಳ ಚೈನು ಕೊಟ್ಟು ಮದುವೆ ಮಾಡಿಕೊಟ್ಟಿದ್ದಾಗಿ, ಮದುವೆಯಾದ ನಂತರ ಆಕೆಯ ಅಕ್ಕ ಕಾವ್ಯಶ್ರೀಯನ್ನು ಚಿಕ್ಕಮಗಳೂರಿನ ಲಕ್ಷ್ಮೀಶ ನಗರದಲ್ಲಿ ಇರುವ ನಿಮ್ಮ ಮನೆಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-73 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆಕೆಯ ಅಕ್ಕ ಕಾವ್ಯಶ್ರೀಯ ಗಂಡ ಅಂದರೆ 1 ನೇ ಆರೋಪಿಯಾದ ನೀನು Software engineer ಆಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-74 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆ ಸಮಯದಲ್ಲಿ ಆಕೆಯ ಅಕ್ಕ ಪಿ.ಹೆಚ್.ಡಿ. ವ್ಯಾಸಂಗ ಮಾಡುತ್ತಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-75 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮದುವೆಯಾದ ನಂತರ 1 ರಿಂದ 3 ನೇ ಆರೋಪಿಗಳಾದ ನೀವು ಮತ್ತು ಕಾವ್ಯಶ್ರೀ ನಿಮ್ಮ ಮನೆಯಲ್ಲಿ ವಾಸವಾಗಿದ್ದಾಗಿ, 4 ನೇ ಆರೋಪಿಯಾದ ನೀನು ಶಿವಮೊಗ್ಗದ ಆಕೆಯ ಗಂಡನ ಮನೆಯಲ್ಲಿ ವಾಸವಾಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-76 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮದುವೆಯಾದ 6 ತಿಂಗಳ ನಂತರ 1 ನೇ ಆರೋಪಿಯಾದ ನೀನು London ಗೆ ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-77 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆದರೆ ಆರೋಪಿಗಳಾದ ನೀವು ಕಾವ್ಯಶ್ರೀಯು ವರದಕ್ಷಿಣೆ ಹಣವನ್ನು ತಂದಿರುವುದಿಲ್ಲ ಎನ್ನುವ ಕಾರಣಕ್ಕೆ 1 ನೇ ಆರೋಪಿಯ ಜೊತೆ London ಗೆ ಕಳುಹಿಸಲಿಲ್ಲ, ಈ ವಿಷಯವನ್ನು ತನ್ನ ಅಕ್ಕ ಕಾವ್ಯಶ್ರೀ ತನಗೆ ಪೋನ್ ಮಾಡಿ ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-78 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ ತನ್ನ ಅಕ್ಕ ಕಾವ್ಯಶ್ರೀಯು ಆಕೆಯ ಗಂಡನ ಜೊತೆ London ನಲ್ಲಿ ಇರಬೇಕು ಎಂದು ಅವಳ ಅತ್ತೆ ಮತ್ತು ಮಾವನ ಕೈ ಕಾಲು ಹಿಡಿದುಕೊಂಡು ಬೇಡಿಕೊಂಡಾಗ ಒಂದು ವರ್ಷದ ನಂತರ ಕಾವ್ಯಶ್ರೀಯನ್ನು London ಗೆ ಕಳುಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-79 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ London ನಿಂದ 1 ನೇ ಆರೋಪಿಯಾದ ನೀನು ಮತ್ತು ಕಾವ್ಯಶ್ರೀ ವಾಪಸ್ಸು ಬಂದು ಚಿಕ್ಕಮಗಳೂರಿನ ಲಕ್ಷ್ಮೀಶ ನಗರದ ಆರೋಪಿಗಳ ಮನೆಯಲ್ಲಿ ವಾಸವಾಗಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-80 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ 1 ನೇ ಆರೋಪಿಯಾದ ನೀನು ಮತ್ತು ನಿನ್ನ ತಂದೆ ತಾಯಿ ಕಾವ್ಯಶ್ರೀಗೆ ವರದಕ್ಷಿಣೆ ಹಣದ ವಿಚಾರವಾಗಿ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ್ದಾಗಿ, 4 ನೇ ಆರೋಪಿಯು ಸಹ ಉಳಿದ ಆರೋಪಿಗಳಿಗೆ ಪೋನ್ ಮಾಡಿ ಕಾವ್ಯಶ್ರೀಯು ವರದಕ್ಷಿಣೆ ತಂದಿಲ್ಲ,

ತರಲು ಹೇಳಿ ಮತ್ತು ಅಲ್ಲಿಯವರೆಗೆ ಹಿಂಸೆ ಕೊಡುತ್ತೀರಿ ಎಂದು ಹೇಳಿದ್ದಾಗಿ, ಆ ವಿಷಯವನ್ನು ತನ್ನ ಅಕ್ಕ ಕಾವ್ಯಶ್ರೀಯೇ ತನಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-81 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ 23.08.2015 ರಂದು ಆಕೆಯ ಅಕ್ಕ ಕಾವ್ಯಶ್ರೀಯು ಲಕ್ಷ್ಮೀಶ ನಗರದಲ್ಲಿ ಆಕೆಯ ಗಂಡನ ಮನೆಯಲ್ಲಿ ಇದ್ದಾಗ, 1 ನೇ ಆರೋಪಿಯಾದ ನೀನು ಆಕೆಗೆ ಹೊಡೆದಿದ್ದಾಗಿ ಮತ್ತು 2 ಮತ್ತು 3 ನೇ ಆರೋಪಿಗಳು ಸಹ ಕಾವ್ಯಶ್ರೀಗೆ ಕೆಟ್ಟ ಕೆಟ್ಟದಾಗಿ ಬೈದಿದ್ದಾಗಿ, 2 ಮತ್ತು 3 ನೇ ಆರೋಪಿಗಳು 1 ನೇ ಆರೋಪಿಗೆ ಕಾವ್ಯಶ್ರೀಗೆ ಹೊಡೆ ಎಂದು ಪ್ರೇರೇಪಿಸಿದ್ದಾಗಿ, ಆ ವಿಷಯವನ್ನು ಸಹ ತನ್ನ ಅಕ್ಕ ತನಗೆ ತಿಳಿಸಿದ್ದಾಗಿ ಮತ್ತು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಗೆ ಕಾವ್ಯಶ್ರೀಯು ದೂರು ನೀಡಲು ಹೋಗಿದ್ದು, ಠಾಣೆಯಲ್ಲಿ ತನ್ನ ಅಕ್ಕ ಮತ್ತು ಆರೋಪಿಗಳಾದ ನಿಮ್ಮನ್ನು ಕರೆಯಿಸಿ ರಾಜೀ ಮಾಡಿದ್ದಾಗಿ, ಆ ವಿಷಯವನ್ನು ತನಗೆ ಕಾವ್ಯಶ್ರೀ ದೂರವಾಣಿ ಮೂಲಕ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-82 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಕಾವ್ಯಶ್ರೀ ಮತ್ತು 1 ನೇ ಆರೋಪಿಯಾದ ನೀನು ಬೆಂಗಳೂರಿಗೆ ಹೋಗಿ ವಾಸಿಸುತ್ತಿದ್ದುದಾಗಿ, ಸ್ವಲ್ಪ ತಿಂಗಳ ನಂತರ ಕಾವ್ಯಶ್ರೀ ಗರ್ಭಿಣಿಯಾಗಿದ್ದಾಗಿ, ಆ ಕಾರಣ ಕಾವ್ಯಶ್ರೀಗೆ ಸೀಮಂತ ಮಾಡಲು ತನ್ನ ತಂದೆ ತಾಯಿ ಆಕೆಯನ್ನು ಬೆಂಗಳೂರಿನಿಂದ ಚಿಕ್ಕಮಗಳೂರಿನ ದಂಟರಮಕ್ಕಿಯ ಮನೆಗೆ ಕರೆದುಕೊಂಡು ಬರೆದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-83 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 16.06.2016 ರಂದು ಆಕೆಯ ಅಕ್ಕ ಕಾವ್ಯಶ್ರೀಗೆ ಗಂಡು ಮಗು ಆಗಿದ್ದಾಗಿ, ಮಗುವಿಗೆ 9 ತಿಂಗಳು ಆದ ನಂತರ ನಾಮಕರಣ ಕಾರ್ಯಕ್ರಮವನ್ನು ಆಕೆಯ ತಂದೆಯ ಮನೆಯಲ್ಲಿ ಮಾಡಿ ಮಗು ಮತ್ತು ಕಾವ್ಯಶ್ರೀಯನ್ನು 1 ನೇ ಆರೋಪಿಯೊಂದಿಗೆ ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದಾಗಿ, ಬೆಂಗಳೂರಿನಲ್ಲಿ ಸ್ವಲ್ಪ ದಿನ 1 ನೇ ಆರೋಪಿಯಾದ ನೀನು ಮತ್ತು ಆಕೆಯ ಅಕ್ಕ ಚೆನ್ನಾಗಿ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-84 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 07.05.2017 ರಂದು ಆಕೆಯ 3 ನೇ ಅಕ್ಕ ಶಾಂತಲ ಇವಳ ಮಗುವಿನ ಹುಟ್ಟು ಹಬ್ಬದ ಉಡುಗೊರೆ ಕೊಡುವ ವಿಚಾರಕ್ಕಾಗಿ ಕಾವ್ಯಶ್ರೀ ಮತ್ತು 1 ನೇ ಆರೋಪಿಯಾದ ನಿನ್ನ ನಡುವೆ ಜಗಳವಾಗಿದ್ದಾಗಿ, ಆಗ 1 ನೇ ಆರೋಪಿಯಾದ ನೀನು ಕಾವ್ಯಶ್ರೀಯ ಕುತ್ತಿಗೆ ಹಿಸುಕಿ ಅವಳನ್ನು ಸಾಯಿಸಲು ಪ್ರಯತ್ನಿಸಿದ್ದಾಗಿ, ನಂತರ ಆಕೆಯ 3 ನೇ ಅಕ್ಕ ಶಾಂತಲ ಮತ್ತು ಆಕೆಯ ಗಂಡ ಕಾವ್ಯಶ್ರೀಯನ್ನು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-85 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಂತರ 1 ನೇ ಆರೋಪಿಯ ವಿರುದ್ಧ ಬೆಂಗಳೂರಿನ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಕಾವ್ಯಶ್ರೀ ದೂರು ನೀಡಿದ್ದಾಗಿ, ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ತನ್ನ ತಂದೆ ರಾಜೇಗೌಡ ಮತ್ತು ಮಾವ ಅಜ್ಜೇಗೌಡ ಅಲ್ಲಿ ಹೋಗಿದ್ದಾಗಿ, ಅಲ್ಲಿ ಪೊಲೀಸರು 2 ಕಡೆಯವರ ನಡುವೆ ರಾಜೀ ಮಾಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-86 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಕಾವ್ಯಶ್ರೀಯನ್ನು 1 ನೇ ಆರೋಪಿಯಾದ ನಿನ್ನ ಚಿಕ್ಕಮಗಳೂರಿನ ಮನೆಗೆ ಕರೆದುಕೊಂಡು ಬಂದು ಬಿಟ್ಟಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-87 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಿಕ್ಕಮಗಳೂರಿಗೆ ಬಂದ ನಂತರ ಕಾವ್ಯಶ್ರೀಯು ಎಂ.ಇ.ಎಸ್. ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿ ಎಂದು ಕೆಲಸ ಮಾಡಿದ್ದಾಗಿ, 1 ನೇ ಆರೋಪಿಯಾದ ನೀನು ಆಗ ವಾರಕ್ಕೆ ಒಮ್ಮೆ ಬೆಂಗಳೂರಿನಿಂದ ಬಂದು ಹೋಗುವುದು ಮಾಡುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-88 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಿಕ್ಕಮಗಳೂರಿನ ಮನೆಯಲ್ಲಿಯು ಸಹ 2 ಮತ್ತು 3 ನೇ ಆರೋಪಿಗಳಾದ ನೀವು ಕಾವ್ಯಶ್ರೀಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದಾಗಿ ಮತ್ತು 4 ನೇ ಆರೋಪಿಯು ಸಹ ನಿಮಗೆ ಫೋನ್ ಮಾಡಿ ಹೆಚ್ಚಿಕೊಡುತ್ತಿದ್ದಾಗಿ, ಆ ವಿಷಯ ಎಲ್ಲವನ್ನು ಕಾವ್ಯಶ್ರೀ ತನಗೆ ಹೇಳಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-89 ಪ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 27.09.2017 ರಂದು ಮಧ್ಯಾಹ್ನ 1.30 ಗಂಟೆಗೆ ತನ್ನ ತಂದೆ ರಾಜೇಗೌಡರು, ತಾನು ತನ್ನ ಗಂಡನ ಮನೆಯಲ್ಲಿ ಇದ್ದಾಗ, ತನ್ನ ಮಾವ ಅಜ್ಜೇಗೌಡರಿಗೆ ಫೋನ್ ಮಾಡಿ, ಕಾವ್ಯಶ್ರೀಗೆ ಅವಳ ಅತ್ತೆ ಮಾವ ಮೊಬೈಲ್ ಫೋನ್ ಚಾರ್ಜರ್ ವೈರಿನಿಂದ ಆಕೆಯ ಕುತ್ತಿಗೆಗೆ ಹಾಕಿ ಕೊಲೆ ಮಾಡಲು ಪ್ರಯತ್ನಿಸಿದ್ದಾಗಿ ಮತ್ತು ಚಾಕುವನ್ನು ಗ್ಯಾಸ್ ಸ್ಟವ್‌ನಲ್ಲಿ ಕಾಯಿಸಿ 3 ನೇ ಆರೋಪಿ ಹುಚ್ಚೇಗೌಡರು ಕಾವ್ಯಶ್ರೀಯ ಎಡಗೈ ಮತ್ತು ಬಲಗಾಲಿಗೆ ಸದರಿ ಚಾಕುವಿನಿಂದ ಬರೆ ಹಾಕಿದ್ದಾಗಿ, ಆ ಸಮಯದಲ್ಲಿ 2 ನೇ ಆರೋಪಿ ಗೀತಾ, ಕಾವ್ಯಶ್ರೀಯನ್ನು ಬಿಗಿಯಾಗಿ ಹಿಡಿದುಕೊಂಡಿದ್ದಾಗಿ, ಇದರಿಂದ ಕಾವ್ಯಶ್ರೀಯನ್ನು ಚಿಕ್ಕಮಗಳೂರಿನ ಮಲ್ಲೇಗೌಡ ಆಸ್ಪತ್ರೆಗೆ ಸೇರಿಸಿದ್ದಾಗಿ, ನೀವು ಬನ್ನಿ

ಎಂದು ತನ್ನ ತಂದೆ ತನ್ನ ಮಾವನಿಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-90 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾನು ಮತ್ತು ತನ್ನ ಮಾವ ಮಲ್ಲೇಗೌಡ ಆಸ್ಪತ್ರೆಗೆ ತನ್ನ ಅಕ್ಕನನ್ನು ನೋಡಲು ಹೋಗಿದ್ದಾಗಿ, ಕಾವ್ಯಶ್ರೀಯು ಆ ದಿನ ಮಧ್ಯಾಹ್ನ ಕಾಲೇಜಿನಿಂದ ಊಟಕ್ಕೆ ಎಂದು ಮನೆಗೆ ಬಂದಾಗ, ಆಕೆಯ ಅತ್ತೆ ಮಾವ ಪುಕಸಟ್ಟೆ ಅನ್ನ ತಿನ್ನುತ್ತಿಯಾ, ದುಡ್ಡು ಕೊಡುವುದಿಲ್ಲ, ವರದಕ್ಷಿಣೆಯನ್ನು ಸಹ ತಂದಿರುವುದಿಲ್ಲ, ಬೇವರ್ಸಿ ಮುಂಡೆ ಎಂದು ಹೇಳಿ ಬೈದಿದ್ದಾಗಿ, ಆ ನಂತರ ಚಾಕುವನ್ನು ಗ್ಯಾಸ್ ಸ್ಟವ್ ಮೇಲೆ ಬಿಸಿ ಮಾಡಿಕೊಂಡು 3 ನೇ ಆರೋಪಿ ಹುಚ್ಚೇಗೌಡರು ಕಾವ್ಯಶ್ರೀಯ ಎಡಗೈ ಮತ್ತು ಬಲಗಾಲಿಗೆ ಬರೆ ಹಾಕಿದ್ದಾಗಿ ಮತ್ತು ಅವಳ ಅತ್ತೆ ಕಾವ್ಯಶ್ರೀಯ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾಗಿ, ಆಗ ಕಾವ್ಯಶ್ರೀಯು ಕಿರುಚಿಕೊಂಡಿದ್ದಾಗಿ, ಆಗ 3 ನೇ ಆರೋಪಿ ಹುಚ್ಚೇಗೌಡರು ಮೊಬೈಲ್ ಚಾರ್ಚರ್ ಫೋನ್ ವೈರ್ ತೆಗೆದುಕೊಂಡು ಕಾವ್ಯಶ್ರೀಯ ಕುತ್ತಿಗೆಗೆ ಬಿಗಿದು ಅವಳಿಗೆ ಕೊಲೆ ಪ್ರಯತ್ನ ಪಟ್ಟಿದ್ದಾಗಿ ಕಾವ್ಯಶ್ರೀ ತನಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-91 ಫ್ರಾ.ಸಾ.10 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಕಾವ್ಯಶ್ರೀಯ ಅತ್ತೆಯು ನೀನು ಸತ್ತರೆ ನನ್ನ ಮಗನಿಗೆ ಇನ್ನೊಂದು ಮದುವೆ ಮಾಡುತ್ತೇನೆ ಎಂದು ಕಾವ್ಯಶ್ರೀಗೆ ಬೆನ್ನಿಗೆ ಗುದ್ದಿದ್ದಾಗಿ, ಆಗ ಕಾವ್ಯಶ್ರೀಯು ಸುಸ್ತಾಗಿ ಮನೆಯಲ್ಲಿ ಮಲಗಿಕೊಂಡಿದ್ದಾಗ ಅವರ ಸಂಬಂಧಿಯಾದ ಸರೋಜ ರವರು ಆಕೆಯ ಮನೆಗೆ ಹೋಗಿ ಗಲಾಟೆಯನ್ನು ಬಿಡಿಸಿ ಆಕೆಯನ್ನು ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾಗಿ, ಆ ವಿಷಯವನ್ನು ಕಾವ್ಯಶ್ರೀ ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರಿಗೆ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-92 ಪ್ರಾ.ಸಾ.11 ಡಾಃಮುರಳಿಧರ್, ಹಿರಿಯ ತಜ್ಞ ವೈದ್ಯರು, ಜಿಲ್ಲಾ ಸರ್ಕಾರಿ ಆಸ್ಪತ್ರೆ, ಚಿಕ್ಕಮಗಳೂರು ಇವರು ತಮ್ಮ ಸಾಕ್ಷ್ಯದಲ್ಲಿ ದಿಃ27.09.2017 ರಂದು ಮಧ್ಯಾಹ್ನ 1.10 ಗಂಟೆಗೆ ಚಾಸಾ.1 ಕಾವ್ಯಶ್ರೀ ಇವಳನ್ನು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಚಾಸಾ.8 ಸರೋಜ ಎಂಬುವವರು ಕರೆದುಕೊಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-93 ಪ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಗಾಯಾಳು ಕಾವ್ಯಶ್ರೀ ಪರೀಕ್ಷಿಸಲಾಗಿ, 1. ಬಲಗಾಲಿನ ಮೇಲೆ ಎರಡು ಬರೆಯ ಗುರುತುಗಳು ಇದ್ದು, ಒಂದು ಬರೆಯ ಆದ ಮೇಲೆ ಇನ್ನೊಂದು ಬರೆ ಕಂಡು ಬಂದಿದ್ದಾಗಿ, ಸದರಿ ಗುರುತುಗಳ ಅಳತೆ 2.5 x 1.0 x 0.5 cm ಆಗಿದ್ದಾಗಿ, 2. ಎಡ ಮುಂಗೈ ಮೇಲೆ 2 ಬರೆಯ ಗುರುತುಗಳು ಕಂಡು ಬಂದಿದ್ದಾಗಿ ,ಅವುಗಳ ಅಳತೆ 2.5 x 1.0 x 0.5 cm ಆಗಿದ್ದಾಗಿ, 3. ಕುತ್ತಿಗೆಯ ಮುಂಭಾಗದಲ್ಲಿ ಹಲವಾರು ತರಚಿದ ಗಾಯಗಳು ಕಂಡು ಬಂದಿದ್ದಾಗಿ, ಜೊತೆಗೆ ಕುತ್ತಿಗೆ ಭಾಗದಲ್ಲಿ ಊತದ ಗಾಯ ಕಂಡು ಬಂದಿದ್ದಾಗಿ, ಸದರಿ ಗಾಯಗಳು ಕತ್ತಿನ ಮುಂಭಾಗದಲ್ಲಿ ಎದ್ದು ಕಾಣುತ್ತಿದ್ದಾಗಿ, ಕತ್ತಿನ ಮುಂಭಾಗದಲ್ಲೆ ಒಂದು ತರಚಿದ ಗಾಯ ಆಗಿದ್ದಾಗಿ, ಅದರ ಸುತ್ತಳತೆ 7 cm ಆಗಿದ್ದು ಕಂಡು ಬಂದಿದ್ದಾಗಿ ಸಾಕ್ಷ್ಯನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-94 ಪ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿರುತ್ತವೆ ಮತ್ತು ಸದರಿ ಗಾಯಗಳು 2 ಗಂಟೆಗಳ ಅವಧಿಯ ಒಳಗೆ ಆಗಿರುತ್ತವೆ, ಮೇಲೆ ಹೇಳಿದ 1 ಮತ್ತು 2 ನೇ ಗಾಯಗಳು ಒಂದು ಚಾಕುವಿನಿಂದ ಬಿಸಿ ಮಾಡಿ ಸದರಿ ಚಾಕುವಿನಿಂದ ವ್ಯಕ್ತಿಗೆ ಬರೆ ಎಳೆದರೆ ಸದರಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-95 ಪ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತಾನು ಗಾಯಾಳುವಿಗೆ ಸಂಬಂಧಿಸಿದಂತೆ ನಿ.ಪಿ.17 ರಂತೆ ಗಾಯದ ಪ್ರಮಾಣ ಪತ್ರ ನೀಡಿದ್ದಾಗಿ, ನಿ.ಪಿ.17 ಗಾಯದ ಪ್ರಮಾಣ ಪತ್ರದಲ್ಲಿ 3 ನೇ ಗಾಯದ ಕೊನೆಯಲ್ಲಿ Strangulation ಎಂದು ನಮೂದಿಸಿದ್ದು, ಮು.ಮಾ.1 ಮೊಬೈಲ್ ಚಾರ್ಜರ್ ವೈರ್ ನಿಂದ ಒಬ್ಬ ವ್ಯಕ್ತಿಯ ಕುತ್ತಿಗೆಗೆ ಎಳೆದು ಬಿಗಿದಾಗ ಆತನು ಗಾಯದ ಪ್ರಮಾಣ ಪತ್ರದಲ್ಲಿ ಹೇಳಿದಂತೆ Strangulation ಆಗುವ ಸಾಧತೆ ಇರುತ್ತದೆ, ಅದೇ ರೀತಿ ಸದರಿ ಮು.ಮಾ.1 ಮೊಬೈಲ್ ವೈರನ್ನು ಒಬ್ಬ ವ್ಯಕ್ತಿಯ ಕುತ್ತಿಗೆಗೆ ಹಾಕಿ ಆ ಕಡೆ ಈ ಕಡೆ ಹಾಕಿ ಎಳೆದಾಗ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸುವ 3 ನೇ ಗಾಯಗಳು ಆಗುವ ಸಾಧತೆ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-96 ಪ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿಃ 01.05.2018 ರಂದು ಪ್ರಕರಣದ ತನಿಖಾಧಿಕಾರಿ ನಿ.ಪಿ.17 ಗಾಯದ ಪ್ರಮಾಣ ಪತ್ರದಲ್ಲಿ ಕಂಡು ಬರುವ ಗಾಯಗಳ ಕುರಿತು ನಿ.ಪಿ.18 ರಂತೆ 4 ಪ್ರಶ್ನಾವಳಿಗಳನ್ನು ರಚಿಸಿ, ಆ ಬಗ್ಗೆ ಚಾಕು ಮತ್ತು ಮೊಬೈಲ್ ಚಾರ್ಜರ್ ವೈರ್ ಗಳಿಂದ ಸದರಿ ಗಾಯಗಳು ಆಗುವ ಸಾಧತೆ ಇರುವ ಬಗ್ಗೆ ಅಭಿಪ್ರಾಯ ಕೇಳಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-97 ಪ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಅದರಂತೆ ಆತನು ದಿಃ03.05.2018 ರಂದು ಸದರಿ 4 ಪ್ರಶ್ನೆಗಳಿಗೆ ನಿ.ಪಿ.19 ರಂತೆ ಅಭಿಪ್ರಾಯ ನೀಡಿದ್ದಾಗಿ, 1. ಗಾಯಾಳುವಿನ ಕುತ್ತಿಗೆಗೆ ಆಗಿರುವ ಗಾಯಗಳು ಈ ಮೊಬೈಲ್ ಚಾರ್ಜರಿನಿಂದ ಕುತ್ತಿಗೆಗೆ ಬಿಗಿದು ಎಳೆದರೆ ಆಗುವ ಸಾಧತೆ ಇದೆಯೇ ಎಂಬ ಪ್ರಶ್ನೆಗೆ ತಾನು ಆಗುವ ಸಾಧತೆ ಇರುತ್ತದೆ ಎಂದು ಉತ್ತರಿಸಿದಾಗಿ, ಈ ಮೊಬೈಲ್ ಚಾರ್ಜರ್ ನಿಂದ ಕುತ್ತಿಗೆಗೆ ಬಿಗಿದು ಎಳೆದರೆ ಸಾವು ಸಂಭವಿಸುವ ಸಾಧತೆ ಇದೆಯೇ ಎಂಬ ಪ್ರಶ್ನೆಗೆ ತಾನು ಸಾವು ಸಂಭವಿಸುವ ಸಾಧತೆ ಇರುತ್ತದೆ ಎಂದು ಉತ್ತರಿಸಿದ್ದಾಗಿ ಮತ್ತು ಗಾಯದ ವಯಸ್ಸಿನ ಬಗ್ಗೆ

ನಿಖರ ಮಾಹಿತಿ ನೀಡಲು ಕೋರಿದ್ದು, ಅದರಂತೆ ತಾನು ಗಾಯಗಳ ವಯಸ್ಸು 2 ಗಂಟೆಗಳಿಗಿಂತ ಕಡಿಮೆ ಇರುತ್ತದೆ ಎಂದು ತಿಳಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-98 ಫ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಕಾವ್ಯಶ್ರೀ ರವರ ಎಡಕೈ ಮತ್ತು ಬಲಕಾಲಿನ ಮೇಲೆ ಇರುವ ಗಾಯಗಳು ಚಾಕುವಿನಿಂದ ಬರೆ ಹಾಕಿದಾಗ ಉಂಟಾದ ಗಾಯಗಳು ಆಗಿರುತ್ತವೆಯೇ ಎಂಬ ಪ್ರಶ್ನೆಗೆ ತಾನು ಚಾಕುವಿನಿಂದ ಬರೆ ಎಳೆದರೆ ಆ ರೀತಿಯ ಗಾಯಗಳು ಆಗುತ್ತವೆ ಎಂದು ಉತ್ತರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-99 ಫ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಮು.ಮಾ.1 ಮೊಬೈಲ್ ಚಾರ್ಜರ್ ವೈರ್ ಮತ್ತು ಮು.ಮಾ.2 ಚಾಕುವಿನಿಂದ ಒಬ್ಬ ವ್ಯಕ್ತಿಗೆ ಹಲ್ಲೆ ಮಾಡಿದರೆ ನಿ.ಪಿ.17 ರಲ್ಲಿ ನಮೂದಿಸಿದ ಗಾಯಗಳು ಹಾಗೂ ತಾನು ನಿ.ಪಿ.19 ರಲ್ಲಿ ನೀಡಿದ ಅಭಿಪ್ರಾಯದಂತೆ ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-100 ಫ್ರಾ.ಸಾ.12 ಶೋಭಾ ಕೆ., ಪಿ.ಎಸ್.ಐ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ28.09.2017 ರಂದು ತಾನು ಠಾಣೆಯಲ್ಲಿದ್ದ ಸಮಯದಲ್ಲಿ ರಾತ್ರಿ 9.00 ಗಂಟೆಗೆ ಚಿಕ್ಕಮಗಳೂರು ಲಕ್ಷ್ಮೀಶನಗರದ ವಾಸಿ ಕಾವ್ಯಶ್ರೀ ಕೋಂ ಸುಪ್ರೀತ್ ಪ್ರವೀಣ್ ಕುಮಾರ್ ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ.1 ರ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ: 41/2017 ರಂತೆ ಪ್ರಕರಣ ದಾಖಲಿಸಿ ನಿಪಿ.21 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿದ್ದಾಗಿ, ಪ್ರಕರಣವು ಘೋರ ಅಪರಾಧವನ್ನು ಒಳಗೊಂಡಿದ್ದರಿಂದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.19 ಮೊಹಮ್ಮದ್ ಅಬ್ಬಾಸ್ ಸಲೀಂ ರವರಿಗೆ ನೀಡಿದ್ದಾಗಿ ಸಾಕ್ಷ್ಯ

ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-101 ಪ್ರಾ.ಸಾ.13 ಮಹಮ್ಮದ್ ಸಲೀಂ ಅಬ್ಬಾಸ್, ಪೋಲೀಸ್ ನಿರೀಕ್ಷಕರು ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 28.09.2017 ರಂದು ಈ ಪ್ರಕರಣದ ಕಡತವನ್ನು ಪ್ರಾಸಾ.12 ಶೋಭಾ ಕೆ. ರವರಿಂದ ಪಡೆದುಕೊಂಡು ಪರಿಶೀಲಿದ್ದಾಗಿ, ದಿನಾಂಕ 29.09.2017 ರಂದು ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರಾದ ಪ್ರಾಸಾ.6, ಪ್ರಾಸಾ.7, ಪ್ರಾಸಾ.8, ಪ್ರಾಸಾ.10, ಚಾಸಾ.11 ಮತ್ತು ಚಾಸಾ.13 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-102 ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಅದೇ ದಿನ ಕೃತ್ಯ ನಡೆದ ಸ್ಥಳವಾದ ಚಿಕ್ಕಮಗಳೂರಿನ ಲಕ್ಷ್ಮೀಶನಗರ 1 ನೇ ಕ್ರಾಸಿನಲ್ಲಿರುವ ಆರೋಪಿತರಾದ ನಿಮ್ಮ ಮನೆಗೆ ಭೇಟಿ ನೀಡಿದ್ದಾಗಿ, ಸ್ಥಳಕ್ಕೆ ಪ್ರಾಸಾ.2 ಡಿಸೋಜ ಮತ್ತು ಪ್ರಾಸಾ.9 ಮೊಹಮ್ಮದ್ ಇಸಾಕ್ ರವರಿಗೆ ನಿಪಿ.16 ರಂತೆ ನೋಟೀಸನ್ನು ಜಾರಿ ಮಾಡಿ ಪಂಚರನ್ನಾಗಿ ಬರಮಾಡಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-103 ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆ ಸಮಯದಲ್ಲಿ ಆರೋಪಿತರ ಮನೆಗೆ ಬೀಗ ಹಾಕಿದ್ದರಿಂದ ಮನೆಯ ಮುಂಭಾಗದಲ್ಲಿ ಹಾಜರಿದ್ದ ಪ್ರಾಸಾ.1 ರವರು ಸದರಿ ಮನೆಯಲ್ಲಿ ಆರೋಪಿತರಾದ ನಿಮ್ಮೊಂದಿಗೆ ವಾಸವಾಗಿದ್ದ ಸಮಯದಲ್ಲಿ ನೀವು ಮೊಬೈಲ್ ಚಾರ್ಜರಿನ ವೈಯರ್ ನಿಂದ ಆಕೆಯ ಕುತ್ತಿಗೆಯನ್ನು ಬಿಗಿದು ಕೊಲೆ ಮಾಡಲು ಪ್ರಯತ್ನಿಸಿದ್ದಾಗಿ ಮತ್ತು ಚಾಕುವನ್ನು ಸ್ಟೌವ್ ಮೂಲಕ ಬಿಸಿ ಮಾಡಿ ಆಕೆಯ ಬಲಗಾಲು ಮತ್ತು ಎಡಗೈಗೆ ಬರೆ ಹಾಕಿದ್ದಾಗಿ ತಿಳಿಸಿದ ಮೇರೆಗೆ, ಸದರಿ ಸ್ಥಳದಲ್ಲಿ ಮೇಲೆ ಹೇಳಿದ ಪ್ರಾಸಾ.2 ಮತ್ತು ಪ್ರಾಸಾ.9 ರವರ ಸಮಕ್ಷಮ ಸಂಜೆ 7.00 ಗಂಟೆಯಿಂದ 7.45 ಗಂಟೆಯವರೆಗೆ ನಿಪಿ.2 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ, ನಿಪಿ.3 ಮತ್ತು ನಿಪಿ.4 ರಂತೆ

ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-104 ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 05.10.2017 ರಂದು ಪ್ರಾಸಾ.1 ರವರು ವೃತ್ತ ನಿರೀಕ್ಷಕರ ಕಚೇರಿಗೆ ಹಾಜರಾಗಿ ಆಕೆ ಮತ್ತು 1 ನೇ ಆರೋಪಿಯಾದ ನಿಮ್ಮ ಮದುವೆ ಆಮಂತ್ರಣ ಪತ್ರಿಕೆ, ಮದುವೆಯ ಸಮಯದಲ್ಲಿ ತೆಗೆದ ಫೋಟೋಗಳು, ಮದುವೆಯ ಪ್ರಮಾಣ ಪತ್ರ ಮತ್ತು ಆರೋಪಿಗಳಾದ ನೀವು ಆಕೆಯ ಕುತ್ತಿಗೆಗೆ ಮೊಬೈಲ್ ಚಾರ್ಜರಿನ ವೈಯರಿನಿಂದ ಬಿಗಿದಾಗ ಆದ ಗಾಯಗಳು, ನೀವು ಚಾಕುವಿನಿಂದ ಆಕೆಯ ಎಡಗೈಗೆ ಬರೆ ಹಾಕಿದಾಗ ಆದ ಗಾಯಕ್ಕೆ ಸಂಬಂಧಿಸಿದ ಒಂದು ಫೋಟೋ ಮತ್ತು ಆರೋಪಿತರಾದ ನೀವು ಚಾಕುವಿನಿಂದ ಆಕೆಯ ಬಲಗಾಲಿಗೆ ಬರೆ ಹಾಕಿದಾಗ ಆದ ಗಾಯಕ್ಕೆ ಸಂಬಂಧಿಸಿದ ಫೋಟೋಗಳನ್ನು ನಿ.ಪಿ.6 ರಿಂದ ನಿ.ಪಿ.11 ರಂತೆ ತಂದು ಹಾಜರುಪಡಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-105 ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಚಾಸಾ.4 ರಾಘವೇಂದ್ರ ಮತ್ತು ಪ್ರಾಸಾ.4 ಧರ್ಮೇಗೌಡ ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಅವರ ಸಮಕ್ಷಮ ಪ್ರಾಸಾ.1 ರವರು ಹಾಜರುಪಡಿಸಿದ ದಾಖಲೆಗಳನ್ನು ಸಂಜೆ 5.00 ಗಂಟೆಯಿಂದ 6.00 ಗಂಟೆಯವರೆಗೆ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ನಿಪಿ.5 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-106 ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ನಿಪಿ.5 ರ ಕಾಲಕ್ಕೆ ಅಮಾನತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 14/2017 ರಲ್ಲಿ ಅಳವಡಿಸಿಕೊಂಡಿದ್ದಾಗಿ, ದಿನಾಂಕ 08.10.2017 ರಂದು ಪಿರ್ಯಾದಿದಾರರ ಮರು ಹೇಳಿಕೆಯನ್ನು ಪಡೆದುಕೊಂಡಿದ್ದಾಗಿ, ದಿನಾಂಕ 13.10.2017

ರಂದು ಪಿರ್ಯಾದಿದಾರರ ಗಾಯದ ಪ್ರಮಾಣ ಪತ್ರವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಪ್ರಾಸಾ.11 ಡಾಃಮುರಳಿಧರ್ ರವರಿಂದ ನಿಪಿ.17 ರಂತೆ ಪಡೆದುಕೊಂಡಿದ್ದಾಗಿ, ದಿನಾಂಕಃ16.10.2017 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ.20 ನಿರಂಜನ್ ಕುಮಾರ್ ರವರಿಗೆ ಹಸ್ತಾಂತರಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-107 ಪ್ರಾ.ಸಾ.14 ನಿರಂಜನ್ ಕುಮಾರ್, ಆರಕ್ಷಕ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 19.10.2017 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪ್ರಾಸಾ-13 ಮಹಮದ್ ಸಲೀಂ ಅಬ್ಬಾಸ್ ರವರಿಂದ ಪಡೆದು ಪರಿಶೀಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-108 ಪ್ರಾ.ಸಾ.14 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಅದೇ ದಿನ ಪ್ರಕರಣದ 1 ನೇ ಆರೋಪಿಯಾದ ನೀನು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನಿನನ್ನು ಪಡೆದು ಹಾಜರಾಗಿದ್ದು, ದಸ್ತಗಿರಿ ಕ್ರಮ ಅನುಸರಿಸಿ ನಂತರ ನಿನ್ನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-109 ಪ್ರಾ.ಸಾ.14 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 22.10.2017 ರಂದು ಪ್ರಾಸಾ-1 ಕಾವ್ಯಶ್ರೀ ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಮೇರೆಗೆ ಪ್ರಾಸಾ-5 ಮತ್ತು ಚಾಸಾ-7 ರವರ ಸಮಕ್ಷಮ ಪ್ರಾಸಾ-1 ಕಾವ್ಯಶ್ರೀ ರವರು ತೋರಿಸಿದ ಸ್ಥಳದಲ್ಲಿ ನಿಪಿ.12 ರಂತೆ ಪಂಚನಾಮೆಯನ್ನು ಜರುಗಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-110 ಫ್ರಾ.ಸಾ.14 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಸದರಿ ಪಂಚನಾಮೆಯ ಕಾಲಕ್ಕೆ ಫ್ರಾಸಾ-1 ರವರು ಅವರ ಅತ್ತೆ ಮತ್ತು ಮಾವಂದಿರಾದ 2 ಮತ್ತು 3 ನೇ ಆರೋಪಿತರು ಕೃತ್ಯಕ್ಕೆ ಬಳಸಿದ್ದ ಮು.ಮಾ-1 ಒಂದು ಸ್ಟೀಲ್ ಚಾಕು ಮತ್ತು ಮು.ಮಾ-2 ಮೈಕ್ರೋ ಸಾಫ್ಟ್ ಎಂದು ಬರೆದಿದ್ದ ಒಂದು ಮೊಬೈಲ್ ಚಾರ್ಜರ್ ವೈಯರನ್ನು ಹಾಜರುಪಡಿಸಿದ್ದು, ಅವುಗಳನ್ನು ಮೇಲೆ ಹೇಳಿದ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದಾಗಿ, ಸದರಿ ಮುದ್ದೆಮಾಲುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ:27/2017 ರಲ್ಲಿ ನಿಪಿ.23 ರಂತೆ ಅಳವಡಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿದ್ದಾಗಿ, ಫೋಟೋಗಳನ್ನು ತೆಗೆಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-111 ಫ್ರಾ.ಸಾ.14 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ದಿನಾಂಕ 01.05.2018 ರಂದು ಚಿಕ್ಕಮಗಳೂರು ಮಲ್ಲೇಗೌಡ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಫ್ರಾಸಾ-11 ರವರಿಗೆ ಅಮಾನತ್ತುಪಡಿಸಿಕೊಂಡಿದ್ದ ಮು.ಮಾ-1 ಮತ್ತು 2 ನ್ನು ನಿಪಿ.18 ರಂತೆ ಮನವಿಯೊಂದಿಗೆ ಸಲ್ಲಿಸಿಕೊಂಡು ಅಭಿಪ್ರಾಯ ವರದಿಯನ್ನು ಕೋರಿದ್ದಾಗಿ, ದಿನಾಂಕ 03.05.2018 ರಂದು ಫ್ರಾಸಾ-11 ರವರಿಂದ ಆ ಬಗ್ಗೆ ನಿಪಿ.19 ರಂತೆ ಅಭಿಪ್ರಾಯ ವರದಿಯನ್ನು ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-112 ಫ್ರಾ.ಸಾ.14 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಾವ್ಯಶ್ರೀರವರು ಚಿಕಿತ್ಸೆ ಪಡೆದಿದ್ದ ಬಗ್ಗೆ ಅದೇ ದಿನ ನಿಪಿ.24 ರಂತೆ ಗಾಯದ ಪ್ರಮಾಣ ಪತ್ರ ಮತ್ತು ನಿಪಿ.25 ರಂತೆ ಹೊರರೋಗಿ ಕಾರ್ಡನ್ನು ಪಡೆದುಕೊಂಡಿದ್ದಾಗಿ, ಕೃತ್ಯ ನಡೆದ ಸ್ಥಳದ ದಾಖಲೆಯನ್ನು ಚಾಸಾ-14 ರವರಿಂದ ನಿಪಿ.20 ರಂತೆ ಪಡೆದುಕೊಂಡಿದ್ದಾಗಿ, ತನಿಖೆಯನ್ನು ಪೂರ್ಣಗೊಳಿಸಿ ದಿನಾಂಕ 09.06.2018 ರಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಪಟ್ಟಿಯನ್ನು

ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-113 ಈ ಕೇಸಿನಲ್ಲಿ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯೇ?

ಉತ್ತರಃ No

ಪ್ರಶ್ನೆ-114 ನಿಮ್ಮ ಪರ ಸಾಕ್ಷಿಗಳ ವಿಚಾರಣೆ ಮಡುವಿರಾ?

ಉತ್ತರಃ No

(ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ಕೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ)

Sd/-
(ಗುರುಪ್ರಸಾದ್ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು